ಸಂಪುಟ 01 | ಸಂಚಿಕೆ 122 | ಬುಧವಾರ 08 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸುಗೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1. World Allergy Day
ಪ್ರತಿ ವರ್ಷ ಜುಲೈ 8ರಂದು ಆಚರಿಸಲಾಗುತ್ತದೆ.
ಅಲರ್ಜಿ ಕಾಯಿಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಇದರ ಉದ್ದೇಶ.
ಅಲರ್ಜಿ ತಡೆಗಟ್ಟುವಿಕೆ, ಸರಿಯಾದ ಚಿಕಿತ್ಸೆ ಮತ್ತು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ತಿಳಿಸಲಾಗುತ್ತದೆ.

2. Math 2.0 Day
ಗಣಿತದ ಪ್ರಾಮುಖ್ಯತೆ ಮತ್ತು ಅದರ ನೈಜ ಜೀವನದಲ್ಲಿನ ಉಪಯೋಗಗಳ ಬಗ್ಗೆ ಜಾಗೃತಿ ಮೂಡಿಸಲು ಆಚರಿಸುವ ದಿನ. ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಗಣಿತದ ಪಾತ್ರವನ್ನು ಉತ್ತೇಜಿಸಲಾಗುತ್ತದೆ.

## ಸುಭಾಷಿತ

ಶಿಕ್ಷಣವು ಮನುಷ್ಯನನ್ನು ಸಂಪೂರ್ಣ ವ್ಯಕ್ತಿಯನ್ನಾಗಿ ರೂಪಿಸುತ್ತದೆ."

–ಕುವೆಂಪು

# ರಾಜ್ಯದಲ್ಲಿ ಮುಂಗಾರು ಚೇತರಿಕೆ, ಪ್ರಮುಖ ಜಲಾಶಯಗಳಿಗೆ ಒಳಹರಿವು ಹೆಚ್ಚಳ

❑ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ಮುಂಗಾರು ಆರಂಭವಾಗಿ ಒಂದೂವರೆ ತಿಂಗಳು ಕಳೆದರೂ ಸಮರ್ಪಕ ಮಳೆಯ ಕೊರತೆಯಿಂದ ಕಂಗೆಟ್ಟಿದ್ದ ರಾಜ್ಯಕ್ಕೆ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆ ಕೊಂಚ ನೆಮ್ಮದಿ ತಂದಿದೆ.**

ರಾಜ್ಯದ ವಿವಿಧ ಭಾಗಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಮುಖ ಜಲಾಶಯಗಳಿಗೆ ಒಳಹರಿವು ಹೆಚ್ಚಳವಾಗಿದ್ದು, ಅಣೆಕಟ್ಟುಗಳ ನೀರಿನ ಮಟ್ಟ ಏರಿಕೆಯಾಗುತ್ತಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಉತ್ತಮ ಮಳೆಯಾದ ಪರಿಣಾಮ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಆಲಮಟ್ಟಿ ಜಲಾಶಯಕ್ಕೆ ಸೋಮವಾರದಿಂದ ಮತ್ತೆ ನೀರಿನ ಹರಿವು ಆರಂಭವಾಗಿದೆ.

ಜಲಾಶಯಕ್ಕೆ 1,239 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದ ಗರಿಷ್ಠ ಮಟ್ಟ 519.60 ಮೀಟರ್ ಹಾಗೂ ಪ್ರಸ್ತುತ ಸಂಗ್ರಹ 123 ಟಿಎಂಸಿ ಅಡಿ ಇದೆ.ಮಲೆನಾಡಿನಲ್ಲಿ ಸು-



ರಿಯುತ್ತಿರುವ ಮಳೆಯ ಪರಿಣಾಮ ಶಿವಮೊಗ್ಗ ಜಿಲ್ಲೆಯ ಪ್ರಮುಖ ಜಲಾಶಯಗಳಿಗೂ ನೀರಿನ ಹರಿವು ಹೆಚ್ಚಾಗಿದೆ. ಭದ್ರಾ ಜಲಾಶಯಕ್ಕೆ 4,135 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದ ನೀರಿನ ಮಟ್ಟ 139.6 ಅಡಿ ತಲುಪಿದೆ. ಇದರ ಗರಿಷ್ಠ ಮಟ್ಟ 186 ಅಡಿಯಾಗಿದೆ.

ಇನ್ನು ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ ಬೆಳಗ್ಗೆ 8 ಗಂಟೆಗೆ 1,751.60 ಅಡಿ ದಾಖಲಾಗಿದ್ದು, ಹಿಂದಿನ ದಿನಕ್ಕಿಂತ 1.75 ಅಡಿ ಏರಿಕೆಯಾಗಿದೆ. ಜಲಾಶಯಕ್ಕೆ 18,486 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 507 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ತುಂಗ ಭದ್ರಾ ಜಲಾಶಯಕ್ಕೂ ಭಾರೀ ಪ್ರಮಾಣದ ನೀರು ಹರಿದು ಬರುತ್ತಿದೆ. ಜಲಾಶಯದ ಮಟ್ಟ 587.86 ಮೀಟರ್ ತಲುಪಿದ್ದು, ಗರಿಷ್ಠ ಮಟ್ಟ 588.24 ಮೀಟರ್ ಆಗಿದೆ. ಜಲಾಶಯಕ್ಕೆ 21,747 ಕ್ಯೂಸೆಕ್ ಒಳಹ-ರಿವು ಹಾಗೂ 23,784 ಕ್ಯೂಸೆಕ್ ಹೊರಹರಿವು ದಾಖಲಾಗಿದೆ.ಹಾಸನ ಜಿಲ್ಲೆಯ ಗೊರೂರಿನ ಹೇಮಾವತಿ ಜಲಾಶಯಕ್ಕೂ ಕಳೆದ ಎರಡು ದಿನಗಳ ಮಳೆಯಿಂದ ಒಳಹರಿವು ಹೆಚ್ಚಾಗಿದೆ.

ಜಲಾಶಯದ ನೀರಿನ ಮಟ್ಟ 2,894.6 ಅಡಿ ಇದ್ದು, ಗರಿಷ್ಠ ಮಟ್ಟ 2,922 ಅಡಿ ಆಗಿದೆ. ಸೋಮವಾರ 6,924 ಕ್ಯೂಸೆಕ್ ನೀರು ಹರಿದು ಬಂದಿದೆ.ಕೊಡಗು ಜಿಲ್ಲೆಯ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾದ ಪರಿಣಾಮ ಹಾರಂಗಿ ಜಲಾಶಯಕ್ಕೂ ಒಳಹರಿವು ಏರಿಕೆಯಾಗಿದೆ.

ಜಲಾಶಯದ ನೀರಿನ ಮಟ್ಟ 2,835.92 ಅಡಿ ತಲುಪಿದ್ದು, ಇದರ ಗ-ರಿಷ್ಠ ಮಟ್ಟ 2,852.34 ಅಡಿ ಆಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಮಳೆ ಹೀಗೇ ಮುಂದುವರಿದರೆ ಜಲಾಶಯಗಳ ನೀರಿನ ಮಟ್ಟ ಇನ್ನಷ್ಟು ಏರಿಕೆಯಾಗುವ ನಿರೀಕ್ಷೆ ಇದೆ.

## ಬೆಳಗಾವಿಯ ಆರ್‌ಎಸ್‌ಎಸ್ ಸಭೆಗೆ ಅಗತ್ಯ ನೆರವು ನೀಡುತ್ತೇವೆ : ಸಚಿವ ಸತೀಶ್ ಜಾರಕಿಹೊಳಿ

❑ ನೈಜ್ಯ ದೇಸೆ ನ್ಯೂಸ್

**ಬೆಳಗಾವಿಯಲ್ಲಿ ನಡೆಯುವ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಪ್ರಾಂತ ಪ್ರಚಾರಕರ ಸಭೆಗೆ ಜಿಲ್ಲಾಡಳಿತದಿಂದ ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರು ದಿನಗಳ ಸಮಾವೇಶಕ್ಕೆ ಅಗತ್ಯವಿರುವ ಎಲ್ಲಾ ನೆರವನ್ನು ಜಿಲ್ಲಾಡಳಿತ ನೀಡಲಿದೆ. ಆರ್‌ಎಸ್-ಎಸ್ ಸಭೆ ನಡೆಸಲು ನಮ ವಿರೋಧ ಇಲ್ಲ ಎಂದು ಹೇಳಿದರು.**



ಸಮಾವೇಶದಲ್ಲಿ ರಾಜ-ಕೀಯ ವಿಚಾರಗಳು ಚರ್ಚೆಯಾಗುವ ಬಗ್ಗೆ ತಮಗೆ ಮಾಹಿತಿ ಇಲ್ಲ. ತಮದು ರಾಜಕೀಯ ಸಂಘಟನೆಯಲ್ಲ, ನಾವು ರಾಜಕೀಯ ಮಾಡುವುದಿಲ್ಲ ಎಂದು ಆರ್‌ಎಸ್-ಎಸ್ ಹೇಳಿಕೊಂಡಿದೆ. ನಾವು ಕಾದು ನೋಡುತ್ತೇವೆ ಎಂದರು. ಆರ್‌ಎಸ್‌ಎಸ್ ಸಮಾವೇಶಕ್ಕೆ ಅನುಮತಿ ನೀಡುವ ಬಗ್ಗೆ ಗೃಹ ಇಲಾಖೆ ನಿರ್ಧಾರ ತೆಗೆದುಕೊಳ್ಳುತ್ತದೆ. ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಆ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ, ತಮಗೂ ಅದಕ್ಕೂ ಸಂಬಂಧವಿಲ್ಲ ಎಂದು ಜಾರಿಕೊಂಡರು. 3ನೇ ಪುಟಕ್ಕೆ

## ಐದುವರ್ಷದಿಂದ ಸಿದ್ದಗೊಂಡ ಗ್ರಂಥಾಲಯ ಕಟ್ಟಡ, ಉದ್ಘಾಟನೆ ಭಾಗ್ಯ ಇನ್ನೂ ಇಲ್ಲ, ಯಾವಗ ಸುತ್ತಲೂ ದುರ್ವಾಸನ

❑ ನೈಜ್ಯ ದೇಸೆ ನ್ಯೂಸ್

**ಹಾಲಾಪೂರ: ಗ್ರಂಥಾಲಯಗಳು ಜ್ಞಾನದ ಭಂಡಾರ ಅವು ಓದುಗರಿಗೆ ಸ್ಫೂರ್ತಿ ಮತ್ತು ಕಲ್ಪನೆಗಳಿಗೆ ಜನ್ಮ ನೀಡುವ ತಾಣ ಎಂದು ಆಲ್ಬರ್ಟ್ ಐನ್ಸ್ಟೀನ್ ಹೇಳುತ್ತಾರೆ.ಆದರೆ ಮಸ್ಕಿ ತಾಲ್ಲೂಕಿನ ಹಾಲಾಪೂರದಲ್ಲಿ 2016-17 ರ ಸಾಲಿನ ಪ್ರತಾಪಗೌಡ ಪಾಟೀಲ್ ಶಾಸಕರ ಅವಧಿಯಲ್ಲಿ ಎಸ್ ಸಿ ಪಿ, ಟಿ ಎಸ್ ಪಿ ಯೋಜನೆಯಲ್ಲಿ ನಿರ್ಮಿಸಿದ ಗ್ರಾಮ ಪಂಚಾಯತಿ ಗ್ರಂಥಾಲಯ ಕಟ್ಟಡ 15 ಲಕ್ಷ ರೂಪಾಯಿ ಮೊತ್ತದ,**

ನಿರ್ಮಿತಿ ಕೇಂದ್ರ ನಿರ್ಮಾಣದಲ್ಲಿ ಹಾಲಾಪೂರ ಬಿ ಕರಿಯಪ್ಪ ಅವರು ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಿ ಏದಾರು ವರ್ಷವಾದರು ಇನ್ನೂ ಕಟ್ಟಡವನ್ನು ಗ್ರಂಥಾಲಯಕ್ಕೆ ಒಪ್ಪಿಸಿಲ್ಲ, ಕಟ್ಟಡಕ್ಕೆ ಬೀಗ




ಹಾಕಿ ಬಿಟ್ಟಿದ್ದಾರೆ,ನಿರ್ಮಿತಿ ಕೇಂದ್ರದ ಅಂದಿನ ಅಧಿಕಾರಿಗಳು ಇನ್ನೂ ಆರು ಲಕ್ಷರೂಪಾಯಿ ಬಾಕಿ ಹಣ ನನಗೆ ಕೊಟ್ಟಿಲ್ಲ ಅದಕ್ಕೆ ನಾನು ಬೀಗ ಹಾಕಿದ್ದೇನೆ ಎಂದು ಬಿ ಕರಿಯಪ್ಪ ಪಾಟೀಲ್ ನ್ಯೂಜ್ ಜೊತೆ ಮಾತನಾಡಿದರು. ಹಾಲಾಪೂರ ಗ್ರಂಥಾಲಯ ಒಳ್ಳೆಯ ಡಿಜಿಟಲ್ ಆಗಿದ್ದು,ಸಾವಿರಾರು ಪುಸ್ತಕಗಳು,ಕಂಪ್ಯೂಟ-ರ್ ಇವೆ. ದಿನನಿತ್ಯ ನೂರಾರು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಓದಲು ಬರುತ್ತಾರೆ,200 ಕ್ಕೂ ಅಧಿಕ ಸದಸ್ಯರು ಇದ್ದಾರೆ.

**ನನಗೆ ಇನ್ನೂ ಆರು ಲಕ್ಷ ರೂಪಾಯಿ ಬಾಕಿ ಹಣ ಬರಬೇಕು,ಆರುವರ್ಷ ಆಯ್ತು, ಅದಕ್ಕೆ ಗ್ರಂಥಾಲಯ ಕಟ್ಟಡಕ್ಕೆ ಬೀಗ ಹಾಕಿದ್ದೇನೆ" – ಬಿ ಕರಿಯಪ್ಪ ಗುತ್ತೆದಾರ**

**ಸುತ್ತಲೂ ಮೂತ್ರ ವಿಸರ್ಜನೆ ಮಾಡುತ್ತಾರೆ,ಸ್ವಚ್ಛತೆ ಇಲ್ಲ,ಕಾಂಪೌಂಡ್ ವ್ಯವಸ್ಥೆ ಅವಶ್ಯಕತೆ ಇದೆ" – ಸುದೀಪ್ ವಿದ್ಯಾರ್ಥಿ**

**"ಜಾಗತಕೊರತೆ ಇದೆ,ಓದುಗರ ಸಂಖ್ಯೆ ಹೆಚ್ಚಾಗಿದೆ ಅದಕ್ಕೆ ಹೊಸ ಗ್ರಂಥಾಲಯ ಕಟ್ಟಡ ಬೇಗನೆ ವ್ಯವಸ್ಥೆ ಮಾಡಿಕೊಡಿ".... ಗ್ಯಾನಪ್ಪ ಗ್ರಂಥಪಾಲಕ**

## ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ : ಪಿ.ಮೂಕಯ್ಯಸ್ವಾಮಿ

❑ ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ದೇಶದ ಸಮಗ್ರವಾದ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರವು ಅತ್ಯಂತ ಮಹತ್ವದ್ದಾಗಿದೆ ಎಂದು ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಿ.ಮೂಕಯ್ಯಸ್ವಾಮಿ ತಿಳಿಸಿದರು.**

ಅವರು ಪಟ್ಟಣದ ವೀರಶೈವ ಸಂಘದ ಶಾರದಾ ಶಾಲೆ ಆವರಣದಲ್ಲಿ ಸ್ಥಳೀಯ ವರಲಕ್ಷ್ಮೀ ಕ್ರೆಡಿಟ್ ಸಹಕಾರ ಸಂಘ, ರಾಜ್ಯ ಸಹಕಾರ ಮಹಾಮಂಡಳಿ, ಸಹಕಾರ ಇಲಾಖೆ, ಜಿಲ್ಲಾ ಸಹಕಾರ ಯೂನಿಯನ್ನ ಸಹಯೋಗದಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಸಹಕಾರದಿನದ ಅಂಗವಾಗಿ ಏರ್ಪಡಿಸಿದ್ದ ಕ್ಷೇತ್ರ ಕುರಿತ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ದೇಶದಲ್ಲಿ 8.52. ಲಕ್ಷ ಸಹಕಾರ ಸಂಘಗಳಿದ್ದು, 32 ಕೋಟಿ ಜನ ಸದಸ್ಯ-ರಿದ್ದಾರೆ. ಸಹಕಾರಿ ಸಂಘಗಳಿಂದ ದೇಶದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ವರದಾನವಾಗಿದೆ, ಕೇಂದ್ರದಿಂದ ನೇರವಾಗಿ



ರೈತರಿಗೆ ಏಕರೂಪದಲ್ಲಿ ಸಾಲ ವಿತರಿಸುವ ಯೋಜನೆ ಮೂಲಕ ಅಭಿವೃದ್ಧಿಗೆ ಒತ್ತು ನೀಡಲು ಉದ್ದೇಶಿಸಲಾಗಿದೆ. ದೇಶದಲ್ಲಿ 2 ಲಕ್ಷ ಹೊಸ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗ್ರಾಮೀಣ ಪ್ರದೇಶದಲ್ಲಿ ಆರಂಭಿಸಲು ಕೇಂದ್ರ ಸಹಕಾರ ಇಲಾಖೆ ಯೋಜನೆ ರೂಪಿಸಿದೆ ಎಂದರು.

ಅಂತರಾಷ್ಟ್ರೀಯ ಸಹಕಾರ ದಿನದ ಸ್ಮರಣಾರ್ಥ ಸಸಿಗಳನ್ನು ಅವರಣದಲ್ಲಿ ನೆಡಲಾಯಿತು. ವರಲಕ್ಷ್ಮೀ ಸಹಕಾರ ಸಂಘದ ಅಧ್ಯಕ್ಷ ಎಚ್.ಜಗದೀಶ್ ಅಧ್ಯಕ್ಷತೆವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಸಹಕಾರ ಯೂನಿಯನ್ ನಿರ್ದೇಶಕ ಎಚ್.ವೀರಶೇಖರಗೌಡ, ಬಳ್ಳಾರಿ ವಿಜಯನಗರ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕ ಜೆ. ಎಂ.ವೀರಭದ್ರಯ್ಯ, ಉಪನ್ಯಾಸಕ ಕೆ.ಎಚ್. ಮಂಜುನಾಥ್, ವರಲಕ್ಷ್ಮೀ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕ ಲೋಕೇಶ್ರೆಡ್ಡಿ, ಸಹಕಾರ ಸಂಘಗಳ ವ್ಯವಸ್ಥಾಪಕರು, ನಿರ್ದೇಶಕರು, ಸಿಬ್ಬಂದಿಗಳು ಭಾಗವಹಿಸಿದ್ದರು.

## ಕಂಪ್ಲಿಗೆ ಭೇಟಿ ನೀಡಿದ ನಟ ಚೇತನ್ : ಪುತ್ಥಳಿಗೆ ಮಾಲಾರ್ಪಣೆ

❑ ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಬಡವರ ಹಾಗೂ ಸಮ ಸಮಾಜ ನಿರ್ಮಾಣದ ಪರವಾಗಿ ಹೊಸ ರಾಜಕೀಯ ಪಕ್ಷ ಸ್ಥಾಪಿಸಲು ತೀರ್ಮಾನಿಸಲಾಗಿದೆ' ಎಂದು ನಟ ಚೇತನ್ ಹೇಳಿದರು.**

ಪಟ್ಟಣಕ್ಕೆ ಸೋಮವಾರ ಸಂಜೆ ಭೇಟಿ ನೀಡಿ, ಇಲ್ಲಿನ ಸಣಾಪುರ ರಸ್ತೆಯ ಅಂಬೇಡ್ಕರ್ ಕಾಲೋನಿ ಬಳಿಯ ಮುಖ್ಯರಸ್ತೆ ಬದಿಯಲ್ಲಿರುವ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್, ಡಾ.ಬಾಬು ಜಗಜೀವನ್ ರಾಮ್ ಪುತ್ಥಳಿಗೆ ಮಾಲಾರ್ಪಣೆ ಅರ್ಪಿಸಿದ ನಂತರ ಅಂಬೇಡ್ಕರ್ ಸಂಘದ ಅಧ್ಯಕ್ಷ ಎಸ್.ರುದ್ರಮುನಿ ನೇತೃತ್ವದಲ್ಲಿ ಅಭಿಮಾನಿಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, ರಾಜ್ಯದಲ್ಲಿ ಜನರ ಸಮಸ್ಯೆಗಳ ನಿವಾರಣೆಯಾಗಬೇಕಾದರೆ ಹೊಸ ರಾಜಕೀಯ ಪಕ್ಷದ ಅವಶ್ಯಕತೆ ಇದೆ'. 'ರಾಜ್ಯದಾದ್ಯಂತ ವಿವಿಧ ಕ್ಷೇತ್ರಗಳಿಗೆ



ಪ್ರವಾಸ ಕೈಗೊಂಡು ಹೊಸ ರಾಜ-ಕೀಯ ಪಕ್ಷದ ಸ್ಥಾಪನೆ ಕುರಿತು ಸಮಾನ ಮನಸ್ಕರ ಸಭೆ ನಡೆಸಲಾಗುತ್ತಿದ್ದು, ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.

ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದ ಸಮಾನತೆ, ಮತದಾನದ ಹಕ್ಕು ಸೇರಿದಂತೆ ನಾಡಿನಲ್ಲಿ ಬಹುಜನರ ನೆಮ್ಮದಿಯ ಬದುಕಿಗೆ ಸ್ವತಂತ್ರ ನೀಡಿದ್ದಾರೆ. ಅವರ ಆದರ್ಶಗಳ ಪರಿಪಾಲಿಸುವ ಮೂಲಕ ಉತ್ತಮ ನಾಗರೀಕರಾಗಿ ಬದುಕು ಕಟ್ಟಿಕೊಳ್ಳೋಣ ಎಂದರು. ನಂತರ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷ ಎಸ್.ರುದ್ರಮುನಿ ಮಾತನಾಡಿ, ಅಂಬೇಡ್ಕರ್ ಅವರು ಕೇವಲ ಒಬ್ಬ ವ್ಯಕ್ತಿಯಲ್ಲ, ಅವರು ಒಂದು ಶಕ್ತಿ. ಶೋಷಿತರ ಧ್ವನಿಯಾಗಿ, ಜ್ಞಾನದ ಸಂಕೇತವಾಗಿ ಬೆಳೆದ ಅವರು ನೀಡಿದ ಕೊಡುಗೆಗಳು ಇಂದಿಗೂ ನಮ್ಮ ಪ್ರಜಾಪ್ರಭುತ್ವದ ಅಡಿಪಾಯವಾಗಿವೆ ಎಂದರು.

ಇಲ್ಲಿನ ಡಾ.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್ ರಾಮ್ ಅವರ ಪುತ್ಥಳಿಗೆ ಹೂವಿನ ಹಾರಗಳನ್ನು ಹಾಕಿ ನಮಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ವಿಜಯಕುಮಾರ, ಹೊನ್ನೂರಪ್ಪ, ತಿಪ್ಪೇಸ್ವಾಮಿ, ಬಾಬು, ಮ-ರಿಸ್ವಾಮಿ, ಯಲ್ಲಪ್ಪ, ಧನಂಜಯ, ರವಿ ಮಣ್ಣೂರು, ಪ್ರಕಾಶ, ಗ್ಯಾಸ್ ರಾಜ, ಮಾರೆಣ್ಣ, ಉಮೇಶ, ಮಂಜು, ರಾಜ, ಸುಂದರ, ಸುದೀಪ್, ಆನಂದ, ವಿದ್ಯ, ದುರುಗೇಶ, ಪುರುಷೋತ್ತಮ, ಕುಬೇರ, ರಾಘವೇಂದ್ರ ಇದ್ದರು.

## ಸಂಕನೂರಿನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಆಂಗ್ಲ ಮಾಧ್ಯಮ ನವೋದಯ ಮಾದರಿಯ ಶಾಲೆಯಲ್ಲಿ ಅತಿಥಿ ಶಿಕ್ಷಕರೇ ಆಸರೆ; ಮೂಲ ಸೌಕರ್ಯಗಳ ಕೊರತೆ, ಜನಪ್ರತಿನಿಧಿಗಳ ನಿರ್ಲಕ್ಷ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ರಾಯಚೂರು ಸಮೀಪದ ಸಂಕನೂರು ಗ್ರಾಮದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಆಂಗ್ಲ ಮಾಧ್ಯಮ ನವೋದಯ ಮಾದರಿಯ ಶಾಲೆ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದ್ದರೂ, ಹಲವು ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಶಿಕ್ಷಕರ ಅಭಾವದಿಂದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.**

ಕರ್ನಾಟಕ ಹೌಸಿಂಗ್ ಬೋರ್ಡ್ ವತಿಯಿಂದ ನಿರ್ಮಾಣಗೊಂಡ ಶಾಲಾ ಕಟ್ಟಡದ ಕೆಲವು ಕಾಮಗಾ-ರಿಗಳು ಇನ್ನೂ ಪೂರ್ಣಗೊಂಡಿಲ್ಲ. ಈ ಶೈಕ್ಷಣಿಕ ವರ್ಷದಿಂದಲೇ ನೂತನ ಕಟ್ಟಡದಲ್ಲಿ ತರಗತಿಗಳು ಆರಂಭವಾಗಿದ್ದು, ಶಾಲೆಯಲ್ಲಿ 6ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಸುಮಾರು 450 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.



ವಿದ್ಯಾರ್ಥಿಗಳಿಗೆ ಹಾಸ್ಟೆಲ್, ಅಡುಗೆಮನೆ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗಿದ್ದರೂ, ಸ್ವಚ್ಛತೆ ಮತ್ತು ನಿರ್ವಹಣೆಗೆ ಅಗತ್ಯ ಸಿಬ್ಬಂದಿಯ ಕೊರತೆ ಕಾಡುತ್ತಿದೆ. ಶಾಲೆಯಲ್ಲಿ ಕೇವಲ 6 ಮಂದಿ ಕಾಯಂ ಶಿಕ್ಷಕರು ಇದ್ದು, 12 ಮಂದಿ ಅತಿಥಿ ಶಿಕ್ಷಕರ ನೆರವಿನಿಂದ ಬೋಧನಾ ಕಾರ್ಯ ನಡೆಯುತ್ತಿದೆ. ಜೊತೆಗೆ 10 ಮಂದಿ ಡಿ-ಗ್ರೂಪ್ ಸಿಬ್ಬಂದಿ ಹಾಗೂ ಒಬ್ಬ ವಾರ್ಡನ್ ಸೇವೆ ಸಲ್ಲಿಸುತ್ತಿದ್ದಾರೆ.

ಸಂಕನೂರು ಗ್ರಾಮದ ಮುಖ್ಯರಸ್ತೆಯಿಂದ ಶಾಲೆಯವರೆಗೆ ಗುಣಮಟ್ಟದ ರಸ್ತೆ ನಿರ್ಮಾಣ,

**ಪಾಲಕರಾದ ಹಾಜಿ ಅಲಿ ಮಸರರ್ಕಲ್ ಅವರು, "10ನೇ ತರಗತಿಗೆ ಇಂಗ್ಲಿಷ್ ಶಿಕ್ಷಕರ ಕೊರತೆ ಇರುವುದರಿಂದ ಕೂಡಲೇ ಇಂಗ್ಲಿಷ್ ಶಿಕ್ಷಕರನ್ನು ನೇಮಿಸಬೇಕು" ಎಂದು ಆಗ್ರಹಿಸಿದರು.**

ವಿದ್ಯಾರ್ಥಿಗಳಿಗಾಗಿ ಆಟದ ಮೈದಾನ ಹಾಗೂ ಇತರೆ ಮೂಲಸೌಕರ್ಯಗಳನ್ನು ಶೀಘ್ರ ಅಭಿವೃದ್ಧಿಪಡಿಸುವಂತೆ ಪಾಲಕರು ಆಗ್ರಹಿಸಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ. ಜಿಲ್ಲೆಯ ಜನಪ್ರತಿನಿಧಿಗಳು, ಸಂಸದರು ಹಾಗೂ ಸಂಬಂಧಪಟ್ಟ ಸಚಿವರು ಇದುವರೆಗೆ ಶಾಲೆಗೆ ಭೇಟಿ ನೀಡದೇ ನಿರ್ಲಕ್ಷ್ಯ ತೋರಿದ್ದಾರೆ ಎಂದು ಪಾಲಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹೆಸರು ಬಹಿರಂಗಪಡಿಸಲು ಇಚ್ಛಿಸದ ಅತಿಥಿ ಶಿಕ್ಷಕರೊಬ್ಬರು, "ಕಡಿಮೆ ಗೌರವಧನದಲ್ಲಿ ರಾಯಚೂ-ರಿನಿಂದ ಸುಮಾರು 15 ಕಿ.ಮೀ. ದೂರ ಪ್ರಯಾಣಿಸಿ ಬೋಧನೆ ಮಾಡುವುದು ಕಷ್ಟಕರವಾಗಿದೆ. ಕನಿಷ್ಠ ವೇತನದ ಆಧಾರದ ಮೇಲೆ ಗೌರವಧನ ನೀಡಬೇಕು" ಎಂದು ಮನವಿ ಮಾಡಿದರು. ಹಾಸ್ಟೆಲ್‌ನ ಪ್ರತಿಯೊಂದು ಮಹಡಿಗೂ ಪ್ರತ್ಯೇಕ ಕುಡಿಯುವ ನೀರಿನ ಘಟಕ ಅಳವಡಿಸುವುದು ಹಾಗೂ 247 ಸಂಪರ್ಕಕ್ಕಾಗಿ ವಿಶೇಷ ದೂರವಾಣಿ ವ್ಯವಸ್ಥೆ ಕಲ್ಪಿಸುವಂತೆ ಪಾಲಕರಾಧ ಮಹಮ್ಮದ್ ಮುಸ್ತಫಾ ದೇವದುರ್ಗ ಒತ್ತಾಯಿಸಿದ್ದಾರೆ.

**ಶಾಲೆಯ ಪ್ರಾಂಶುಪಾಲ ಇಸ್ಮೈಲ್ ಸಾಬ್ ಮಾತನಾಡಿ, "ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾಯಂ ಶಿಕ್ಷಕರ ಅಗತ್ಯವಿದ್ದು, ಸರ್ಕಾರ ಶೀಘ್ರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕು. ಜೊತೆಗೆ ಉಳಿದಿರುವ ಮೂಲಸೌಕರ್ಯಗಳ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು" ಎಂದು ತಿಳಿಸಿದರು.**

**ಗ್ರಾಮ ಪಂಚಾಯತ್ ಸದಸ್ಯ ಖಾಜಾ ಹುಸೇನ್ ಬಿಚಾಲಿ ಅವರು, "ಶಿಕ್ಷಕರ ವಸತಿ ಕಟ್ಟಡಗಳ ಕಾಮಗಾ-ರಿಯನ್ನು ಶೀಘ್ರ ಪೂರ್ಣಗೊಳಿಸಿ ಬಳಕೆಗೆ ನೀಡಬೇಕು" ಎಂದು ಸರ್ಕಾರವನ್ನು ಒತ್ತಾಯಿಸಿದರು.**

## ಸಾಹಿತ್ಯ ಸಿಂಚನ

### ಸಂಸ್ಕೃತ

ಸಂಸ್ಕೃತವೆಂಬುದು ಜ್ಞಾನದ ಭಾಷೆ,
ಭಾರತದ ಹೆಮ್ಮೆಯ ಅಮೂಲ್ಯ ನಿಧಿಯೇ.
ವೇದಗಳ ನಾದವು ಇದರೊಳಗಿದೆ,
ಉಪನಿಷತ್ತಿನ ಸಾರವು ತುಂಬಿದೆ.

ಶ್ಲೋಕಗಳ ಸೊಬಗು ಮನ ಸೆಳೆಯುತ್ತದೆ,
ಸದ್ಗುಣಗಳ ದಾರಿ ತೋರಿಸುತ್ತದೆ.
ಋಷಿಮುನಿಗಳ ಅಮೂಲ್ಯ ಕಾಣಿಕೆ,
ಜ್ಞಾನಭಂಡಾರದ ದಿವ್ಯ ಕೀಲಿಕೈ.

ಸಂಸ್ಕೃತಿ ಉಳಿಸುವ ಪವಿತ್ರ ಭಾಷೆ,
ಸತ್ಯ ಧರ್ಮದ ಬೆಳಕಿನ ದೀಪವೇ.
ಸಾಹಿತ್ಯದ ಸೊಬಗು ಹೆಚ್ಚಿಸುವುದು,
ಮನದೊಳಗೆ ಜ್ಞಾನ ತುಂಬಿಸುವುದು.

ಕಲಿತವರಿಗೆ ಗೌರವ ತರುವುದು,
ಕೇಳಿದವರಿಗೆ ಸ್ಫೂರ್ತಿ ನೀಡುವುದು.
ವಿಶ್ವವಂದಿತ ಪವಿತ್ರ ಭಾಷೆ,
ಮಾನವತೆಗೆ ದಾರಿ ತೋರಿಸುವ ಭಾಷೆ.

ಸಂಸ್ಕೃತ ಕಲಿಯೋಣ, ಬೆಳೆಸೋಣ,
ನಮ್ಮ ಪರಂಪರೆಯನ್ನು ಉಳಿಸೋಣ.
ಜ್ಞಾನದ ಬೆಳಕನು ಹರಡಿಸೋಣ,
ಸಂಸ್ಕೃತ ಭಾಷೆಗೆ ನಿತ್ಯ ನಮನ.

–ಎ ಏನ್ ರಮೇಶ್ ಗುಬ್ಬಿ

## ಹೊಸೂರು ಜವುಕು( ರೆಗುಲೇಟರ್ ಕ್ಯಾಂಪ್ ) ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಸ್ಕೂಲ್ ಬ್ಯಾಗ್ ಮತ್ತು ಪುಸ್ತಕ ವಿತರಣೆ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಆಶಾ ಜ್ಯೋತಿ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಣೆ ನಡೆಯಿತು. ಈ ವೇಳೆ ಮಾತನಾಡಿದ ಶಾಲಾ ಮುಖ್ಯಗುರು ಮಾಲಿಕ್ ಶಿಕ್ಷಣಕ್ಕೆ ಎಲ್ಲಾ ಮಕ್ಕಳ ತಂದೆ ತಾಯಿಗಳು ಹೆಚ್ಚಿನ ಮಹತ್ವ ಕೊಡುತ್ತಾರೆ.**

ಕಲಿಕೆಗೆ ಅಗತ್ಯವಿರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಎಷ್ಟೇ ಕಷ್ಟ ಆದರೂ ತಮ್ಮ ಮಕ್ಕಳಿಗೆ ಒದಗಿಸುತ್ತಾರೆ. ಉತ್ತಮ ಕಾರ್ಯ ನಿರ್ವಹಿಸುತ್ತಿರುವ ಆಶಾಜ್ಯೋತಿ ಫೌಂಡೇಶನ್ ಸಹಾಯದಿಂದ ಉತ್ತಮ ಶಿಕ್ಷಣ ಪಡೆದು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಆದರೆ ಕಲಿತ ನಂತರ ಮಕ್ಕಳು, ತಮ್ಮ ಪೋಷಕ–ರಿಗೆ ಸಾಧ್ಯವಾದಷ್ಟು ನೆರವು ಆಗುವುದರೊಂದಿಗೆ ಅವರನ್ನು ಚೆನ್ನಾಗಿ ಆರೈಕೆ ಮಾಡಬೇಕು




ಮತ್ತು ಇಂತಹ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಫೌಂಡೇಶನ್ ನ ಪದಾಧಿಕಾ–ರಿಗಳಾದ ಜವುಕು ಅರ್ಜುನ್ ಬಾಬು ಮತ್ತು ಸಹದೇವ ರವರು ಮಾತನಾಡಿ, ಸತತ ಮೂರು ವರ್ಷಗಳಿಂದ ಈ ಶಾಲೆಗೆ ಕಲಿಕೆಗೆ ಬೇಕಾದ ಪರಿಕರಗಳನ್ನು ನೀಡುತ್ತಿದ್ದೇವೆ ಸ್ವಯಂ ಆಸಕ್ತಿಯಿಂದ ಪುಸ್ತಕಗಳು ಓದಿ ದೈನಂದಿನ ಅನುಭವಗಳಿಂದ ಕಲಿಯಿರಿ, ಉದ್ಯೋಗಕ್ಕೆ ಪೂರಕವಾದ ನಿರ್ದಿಷ್ಟ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳಿ, ದಿನಕ್ಕೆ ಕನಿಷ್ಠ 20–30 ನಿಮಿಷ ಹೊಸ ವಿಷಯಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ ದೇಶಕ್ಕೆ ಒಳ್ಳೆ ಪ್ರಜೆಗಳಾಗಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

100 ಮಕ್ಕಳಿಗೆ ಶಾಲಾಬ್ಯಾಗ್, ಪ್ರತಿ ಮಕ್ಕಳಿಗೆ 6ನೋಟ್ ಪುಸ್ತಕಗಳನ್ನು ವಿತರಿಸಲಾಯಿತು. ಇವರ ಸಮಾಜ ಸೇವೆಗೆ ಶಾಲಾವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸಮಾರಂಭದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ಗೋಪಾಲ, ಗ್ರಾ.ಪಂ. ಮಾಜಿ ಅಧ್ಯಕ್ಷ ಪಂಪಾಪತಿ, ಸಹಶಿಕ್ಷಕರಾದ ಸುನೀತಾ ಊರಿನ ಗಣ್ಯರು, ಪಾಲಕ–ಪೋಷಕರು ಸೇರಿದಂತೆ ಮಕ್ಕಳು ಹಾಜರಿದ್ದರು.

## ಡಾ. ಜಾವೀದ್ ಖಾನ್ ಜನ್ಮದಿನ: ಸಮಾಜಸೇವೆಯ ಮೂಲಕ ಅರ್ಥಪೂರ್ಣ ಆಚರಣೆ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಸಮಾಜಸೇವಕ ಹಾಗೂ ದಲಿತ ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಜಾವೀದ್ ಖಾನ್ ಅವರ ಜನ್ಮದಿನದ ಅಂಗವಾಗಿ ಮಾನ್ವಿ ಪಟ್ಟಣ ಮತ್ತು ಚೀಕಲಪರ್ವಿ ಗ್ರಾಮದಲ್ಲಿ ಮಂಗಳವಾರ ವಿವಿಧ ಸಮಾಜಮುಖಿ ಸೇವಾ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಜರುಗಿದವು.**

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಮಾನ್ವಿ ಪಟ್ಟಣದ ಶ್ರೀ ನರಳು ಅನಾಥಾಶ್ರಮ ಹಾಗೂ ಶ್ರೀ ಚನ್ನಬಸವೇಶ್ವರ ಅಂಧ ಮಕ್ಕಳ ಶಾಲೆಯಲ್ಲಿ ಅನ್ನಸಂತರ್ಪಣೆ ನಡೆಸಲಾಯಿತು. ಬಳಿಕ ಮಾನ್ವಿ ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿ ಅವರ ಆರೋಗ್ಯವನ್ನು ವಿಚಾರಿಸಲಾಯಿತು. ನಂತರ ಮಾನ್ವಿ ತಾಲೂಕಿನ ಚೀಕಲಪರ್ವಿ ಗ್ರಾಮದಲ್ಲಿ ಸಾರ್ವಜನಿಕ–ರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿದ್ದು, ನೂರಾರು ಗ್ರಾಮಸ್ಥರು, ಯುವಕರು ಹಾಗೂ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಸೇನೆಯ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ತಾಜುದ್ದೀನ್ ಚೀಕಲಪರ್ವಿ, ಡಾ. ಜಾವೀದ್ ಖಾನ್ ಅವರು ಸಮಾಜದ ಶೋಷಿತರು, ಬಡವರು ಹಾಗೂ ಅಸಹಾಯಕರ ಪರ ನಿರಂತರವಾಗಿ ಹೋರಾಟ ನಡೆಸುತ್ತಿರುವ ಜನಪರ ನಾಯಕರು ಎಂದು ಹೇಳಿದರು. ಅವರ ಸಾಮಾಜಿಕ ಸೇವೆ, ಜನಪರ ಹೋರಾಟಗಳು ಹಾಗೂ ನಿಸ್ವಾರ್ಥ ಸೇವಾ ಮನೋಭಾವವು ಇಂದಿನ ಯುವಕರು ಮತ್ತು ಹೋರಾಟಗಾರರಿಗೆ ಸ್ಫೂರ್ತಿದಾಯಕವಾಗಿದೆ. ಜನ್ಮದಿನವನ್ನು ಆಡಂಬರದಿಂದ ಆಚರಿಸುವ ಬದಲು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿರುವುದು ಎಲ್ಲ–ರಿಗೂ ಮಾದರಿಯಾಗಿದೆ ಎಂದು ತಿಳಿಸಿದರು.

"ಹಸಿದವರಿಗೆ ಅನ್ನ ನೀಡುವುದಕ್ಕಿಂತ ದೊಡ್ಡ ದಾನ ಮತ್ತೊಂದಿಲ್ಲ" ಎಂಬ ಸಂದೇಶದೊಂದಿಗೆ ಆಯೋಜಿಸಲಾದ ಈ ಕಾರ್ಯಕ್ರಮಗಳು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾದವು. ಈ ಸಂದರ್ಭದಲ್ಲಿ ಹಸನ್ ಗೋಕುಲ್, ಸಿದ್ದರೆಡ್ಡಿ, ರೇಣುಕಾ ರಾಜ, ಮಂಜುನಾಥ್, ರಾಜಸಾಬ್ ನೀರಮಾನ್ವಿ, ಗೋಕುಲ್ ಸಾಬ್, ನಾಗರಾಜ್, ವಾಸುದೇವನ್ ಸೇರಿದಂತೆ ಡಾ. ಜಾವೀದ್ ಖಾನ್ ಅವರ ಅಭಿಮಾನಿಗಳು, ದಲಿತ ಸೇನೆಯ ಪದಾಧಿಕಾರಿಗಳು, ಗ್ರಾಮಸ್ಥರು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

## ಮೃತ ಲಕ್ಷ್ಮಣರಾವ್ ಮನೆಗೆ ಶಾಸಕ ನಾಡಗೌಡ ಭೇಟಿ: ಸಾಂತ್ವನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಪುರಸಭೆ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಲಕ್ಷ್ಮಣರಾವ್ ಮಹಿಂದ್ರಕರ ಅವರು ಇತ್ತೀಚಿಗೆ ನಿಧನರಾದ ಹಿನ್ನೆಲೆಯಲ್ಲಿ ಕೆ ಎಸ್ ಡಿ ಎಲ್ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡರು ಮಂಗಳವಾರ ಅವರ ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.**



ಈ ಸಂದರ್ಭದಲ್ಲಿ ಶಾಸಕರು ದಿವಂಗತ ಲಕ್ಷ್ಮಣರಾವ್ ಮಹಿಂದ್ರಕರ ಅವರೊಂದಿಗಿನ ತಮ್ಮ ರಾಜಕೀಯ ಒಡನಾಟ, ಪಕ್ಷದ ಕುರಿತು ಅವರಿಗಿದ್ದ ನಿಷ್ಠೆ ಹಾಗೂ ಅವರಲ್ಲಿದ್ದ ಒಳ್ಳೆಯ ಮಾನವೀಯ ಗುಣಗಳನ್ನು ಮೆಲುಕು ಹಾಕಿ ಇವತ್ತು ನಾನು ಪಕ್ಷದ ಒಬ್ಬ ಒಳ್ಳೆಯ ನಿಷ್ಠಾವಂತ ಮುಖಂಡನನ್ನು ಕಳೆದುಕೊಂಡಿದ್ದೇನೆ ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಈ ದುಃಖವನ್ನು ಸಹಿಸುವ ಶಕ್ತಿ ಅವರ ಕುಟುಂಬದ ಸದಸ್ಯರಿಗೆ ನೀಡಲೆಂದು ಪ್ರಾರ್ಥಿಸುತ್ತೇನೆ ಎಂದರು. ಈ ಸಮಯದಲ್ಲಿ ಮೃತ ಲಕ್ಷ್ಮಣ್ ಮಹಿಂದ್ರಕರ ಅವರ ಸಹೋದರ ದಿಲೀಪ ಮಹಿಂದ್ರಕರ, ಎಸ್ ಎಂ ಮಹಿಂದ್ರಕರ,ವಿ.ಬಿ.ಲೋಕರೆ, ತುಳಸಿದಾಸ ಹಂಚಾಟೆ, ಮೋತಿಲಾಲ್ ಮಹಿಂದ್ರಕರ, ಕಿಟ್ಟು ಮಹಿಂದ್ರಕರ,ವಿ–ಜಯ ಮಹಿಂದ್ರಕರ, ಸುರೇಶಧಣಿ ನಾಡಗೌಡ (ಬಿಂಜಲಬಾವಿ), ಸಿದ್ದನಗೌಡ ಪಾಟೀಲ (ನಾವದಗಿ), ಪ್ರಭುಗೌಡ ಮದರಕಲ್ಲ, ನೀಲಮ್ಮಗೌಡತಿ ಪಾಟೀಲ ಹಾಗೂ ಕುಟುಂಬದ ಸದಸ್ಯರು ಇದ್ದರು.

1ನೇ ಪುಟದಿಂದ....

ಕಳೆದ ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆ ಸಂತಸ ಮೂಡಿಸಿದೆ. ಬರಗಾಲ ಎದುರಾಗಬಹುದು, ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು ಎಂಬ ಆತಂಕಗಳು ನಿವಾರಣೆಯಾಗಿವೆ. ಅಣೆಕಟ್ಟೆಗಳಿಗೆ ನೀರಿನ ಒಳ ಹರಿವು ಹೆಚ್ಚಾಗಿದೆ. ಕೃಷ್ಣ, ಮಲಪ್ರಭ, ಘಟ್ಟಪ್ರಭಾ ನದಿಗಳು ತುಂಬಿ ಹ–ರಿಯುತ್ತಿವೆ. ಹಿಡ್ಕಲ್ ಡ್ಯಾಮ್‌ಗೆ ಇನ್ನೂ ನೀರು ತುಂಬಬೇಕು. ಮೂರ್ನಾಲ್ಕು ದಿನಗಳಲ್ಲಿ ರಾಜ್ಯದ ಚಿತ್ರಣವೇ ಬದಲಾಗಲಿದೆ. ಬರದ ಛಾಯೆ ಆವರಿಸುತಿತ್ತು. ಉತ್ತಮ ಮಳೆಯಾಗುತ್ತಿರುವುದ–ರಿಂದ ನೀರಿನ ಬವಣೆ ನೀಗುತ್ತಿದೆ. ಮುಂದಿನ ಮೂರ್ನಾಲ್ಕು ದಿನ ಇದೇ ರೀತಿ ಮಳೆ ಸುರಿದರೆ ಒಳ್ಳೆಯದಾಗಲಿದೆ. ರೈತರು ಈಗಾಗಲೇ ಖುಷಿಯಿಂದಿದ್ದಾರೆ ಎಂದರು. ಹಾವೇರಿಯಲ್ಲಿ ಈಗಾಗಲೇ ಮೋಡ ಬಿತ್ತನೆಯಾಗುತ್ತಿದೆ. ಇದನ್ನು ರಾಜ್ಯಾದ್ಯಂತ ನಡೆಸಲು ಮುಖ್ಯಮಂತ್ರಿಯವರ ಮೇಲೆ ಒತ್ತಡ ಹೇರಲಾಗುವುದು ಎಂದು ಹೇಳಿದರು.ತಮ ಆಪ್ತರೊಬ್ಬರು ಬಿಜೆಪಿ ಸೇರಿರುವುದಕ್ಕೆ ಪ್ರತಿಕ್ರಿಯಿಸಿದ ಸತೀಶ್ ಜಾರಕಿಹೊಳಿ ಅವರು, ಸದರಿ ವ್ಯಕ್ತಿ ನಮ ಸಂಪರ್ಕ ಬಿಟ್ಟು ಒಂದು ವರ್ಷವಾಗಿದೆ. ಈಗ ಬೇರೆ ಪಕ್ಷ ಸೇರಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದು ಹೇಳಿದರು. ಸಚಿವ ಸಂಪುಟ ವಿಸ್ತರಣೆ ಕುರಿತು ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಈ ವಿಚಾರದಲ್ಲಿ ನಾವು ಏನೂ ಹೇಳಲು ಸಾಧ್ಯವಿಲ್ಲ. ಆದರೆ ಸಂಪುಟ ವಿಸ್ತರಣೆ ಶೀಘ್ರವೇ ನಡೆಯಬೇಕೆಂಬುದು ನಮ ಅಭಿಪ್ರಾಯ ಎಂದರು.

# ಹೆಚ್‌ಪಿಇ ಲಸಿಕೆ ಪಡೆದ 36 ಮಕ್ಕಳು

### ಹೆಣ್ಣು ಮಕ್ಕಳಿಗೆ ಮಾರಕವಾಗುವ ಗರ್ಭಕಂಠದ ಕ್ಯಾನ್ಸರ್ ಬರದಂತೆ ತಡೆಯಲು ಹೆಚ್‌ಪಿವಿ ಲಸಿಕೆ ತಪ್ಪದೆ ಹಾಕಿಸಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಾಮಾನ್ಯವಾಗಿ ಕ್ಯಾನ್ಸರ್ ಎಂಬ ಶಬ್ಧವೇ ಒಂದು ರೀತಿಯಲ್ಲಿ ಭಯ, ಆತಂಕ ಹುಟ್ಟಿಸುತ್ತದೆ, ಅದರಲ್ಲೂ ಹೆಣ್ಣು ಮಕ್ಕಳಲ್ಲಿ ಕಂಡು ಬರುವ ಗರ್ಭಕಂಠದ ಕ್ಯಾನ್ಸರ್ ಅತ್ಯಂತ ಮಾರಕವಾಗಿದ್ದು,**

ಭವಿಷ್ಯದಲ್ಲಿ ಹೆಣ್ಣು ಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ಮುಕ್ತಗೊಳಿಸಲು ನೆಮ್ಮದಿಯ ಜೀವನ ನಡೆಸಲು ಪ್ರಸ್ತುತ 14 ವರ್ಷದ ಹೆಣ್ಣು ಮಕ್ಕಳಿಗೆ ಎಲ್ಲ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಹಾಕಲಾಗುವ ಹೆಚ್.ಪಿ.ವಿ ಲಸಿಕೆಯನ್ನು ಪಾಲಕರು ಯಾವುದೆ ಹಿಂದೇಟು ಹಾಕದೆ ಹಾಕಿಸುವುದು ಅತ್ಯಗತ್ಯವಾಗಿದೆ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು.

ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ನಗರದ ಬೊಳಮಾನದೊಡ್ಡಿಯ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ




ಶಾಲೆಯಲ್ಲಿ ಜಾಗೃತಿ ನೀಡಿ 36 ಮಕ್ಕಳು ಲಸಿಕೆ ಪಡೆದ ನಂತರ ಮಾತನಾಡುತ್ತಾ, ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವ ಗರ್ಭಕಂಠದ ಕ್ಯಾನ್ಸರ್ ತಡೆಗೆ ಈ ಲಸಿಕೆ ಅತ್ಯಂತ ಉಪಯುಕ್ತವಾಗಿದ್ದು, ಜಿಲ್ಲೆಯಾದ್ಯಂತ ಹಾಕಲಾಗುತ್ತಿದ್ದು, ಈಗಾಗಲೆ ರಾಯಚೂರು ಜಿಲ್ಲೆಯ ಸರಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ ಶೇಕಡ 60% ವಿದ್ಯಾರ್ಥಿನಿಯ–ರಿಗೆ ಲಸಿಕೆ ಹಾಕಲಾಗಿದೆ. ಪಾಲಕರು ಸ್ವಯಂ ಮುಂದೆ ಬಂದು ಹಾಕಿಸುತ್ತಿದ್ದಾರೆ. ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಲಸಿಕೆ ಬಗ್ಗೆ ತಪ್ಪುಮಾಹಿತಿ ನೀಡಿದ್ದು ಕಂಡು ಬಂದಿದೆ. ಸಾರ್ವಜನಿಕರು ಯಾವುದೇ ತಪ್ಪು ಮಾಹಿತಿಗೆ ಕಿವಿಗೊಡದೆ ಭವಿಷ್ಯದ ದೃಷ್ಟಿಯಿಂದ ತಮ್ಮ ಕುಟುಂಬದ 14 ವರ್ಷದ ಹೆಣ್ಣು ಮಗಳಿಗೆ ಉಚಿತವಾಗಿ ಹೆಚ್.ಪಿ.ವಿ (ಹೂಮನ್ ಪ್ಯಾಪಿಲೋಮ ವೈರಸ್) ವಿರುದ್ಧದ ಲಸಿಕೆ ತಪ್ಪದೆ ಹಾಕಿಸಿ. ಇದಕ್ಕಾಗಿ ಎಲ್ಲ ಸತಕಾರಿ ಆರೋಗ್ಯ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದ್ದು, ಪೋಷಕರು ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಉಚಿತವಾಗಿ ಲಸಿಕೆ ಹಾಕಿಸಲು ಕೋರಿದರು. ಗರ್ಭಕಂಠದ ಕ್ಯಾನ್ಸರ್ ಉಂಟಾಗುವ ಕಾರಣಗಳು: ಸಾಮಾನ್ಯವಾಗಿ ವೈಯಕ್ತಿಕ ಶುಚಿತ್ವ, ಜನನಾಂಗಗಳಲ್ಲಿ ತೊಂದರೆ, ಹುಣ್ಣು, ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹೂಮನ್ ಪ್ಯಾಪಿಲೋಮ ವೈರಸ್ (ಹೆಚ್.ಪಿ.ವಿ) ಸೋಂಕು ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಕ್ಯಾನ್ಸರ್ ಆಗಿ ಬದಲಾವಣೆಯಾಗುತ್ತದೆ. ಈ ಹಿನ್ನಲೆಯಲ್ಲಿ ಮಾರಕವಾಗುವುದನ್ನು ತಡೆಯಲು ಹೆಚ್.ಪಿ.ವಿ ಲಸಿಕೆಯು ಸೂಕ್ತವಾಗಿದೆ ಎಂದರು. ಈ ಸಂದರ್ಭದಲ್ಲಿ ಹರಿಜನವಾಡಾ ಯುಪಿಹೆಚ್‌ಸಿಯ ವೈದ್ಯಾಧಿಕಾರಿ ಡಾ ಸುನೀಲ್, ಜಹೀರಬಾದ್ ಯುಪಿಹೆಚ್‌ಸಿಯ ವೈದ್ಯಾಧಿಕಾರಿ ಡಾ ಶ್ವೇತಾಂಬರಿ, ಪ್ರಾಂಶುಪಾಲರಾದ ನಾಜೀಯಾ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜ ಕೆ, ನಿಲಯಪಾಲಕರಾದ ರೇವಣ ಸಿದ್ದಪ್ಪ, ಶುಶ್ರೂಷಣಾಧಿಕಾರಿ ಹುಸ್ನಾ ಬೇಗಂ, ಪ್ರಾಥಮಿಕಆರೋಗ್ಯಸುರಕ್ಷಣಾಧಿಕಾರಿ ಮಂಜುಳಾ ಸೇರಿದಂತೆ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ರಜಪೂತ ಸಮಾಜದಿಂದ ವಿದ್ಯಾರ್ಥಿನಿ ಇಂದಿರಾ ಬಾಯಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟ: ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಆಲ್ ಇಂಡಿಯಾ ರ?ಯಾಂಕಿಂಗನಲ್ಲಿ 227ನೇ ರ?ಯಾಂಕ್ ಪಡೆದ ಪಟ್ಟಣದ ವಿದ್ಯಾರ್ಥಿನಿ ಇಂದಿರಾಬಾಯಿ ಭವಾನಸಿಂಗ್ ಹಜೇರಿ ಇವರನ್ನು ರಜಪೂತ ಸಮಾಜದ ವತಿಯಿಂದ ಸೋಮವಾರ ಅಭಿನಂದಿಸಿ ಸನ್ಮಾನಿಸಲಾಯಿತು.**

ಈ ಸಂದರ್ಭದಲ್ಲಿ ರಜಪೂತ ಸಮಾಜದ ಅಧ್ಯಕ್ಷ ಹರಿಸಿಂಗ್ ಮೂಲಿಮನಿ ಹಾಗೂ ಯುವ ಮುಖಂಡ ವಿಜಯಸಿಂಗ್ ಹಜೇರಿ ಅವರು ಮಾತನಾಡಿ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿನಿಯಾದ ಇಂದಿರಾ ಬಾಯಿ ಭವಾನಸಿಂಗ್ ಹಜೇರಿ ಅವರು



ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ 227ನೇ ರ?ಯಾಂಕ್ ಪಡೆದಿರುವುದು ಇಡೀ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿದೆ. ಈ ಸಾಧನೆ ಮಾಡುವುದರೊಂದಿಗೆ ಈ ವಿದ್ಯಾರ್ಥಿನಿ ಎಲ್ಲರಿಗೂ ಮಾದರಿ ಆಗಿದ್ದಾಳೆ ಅವಳು ಭವಿಷ್ಯದಲ್ಲಿಯೂ ಇದಕ್ಕಿಂತಲೂ ಉತ್ತಮ ಸಾಧನೆಯನ್ನು ಮಾಡಲಿ ಎಂಬುದು ನಮ್ಮೆಲ್ಲರ ಹಾರೈಕೆಯಾಗಿದೆ ಎಂದರು.


ಈ ಸಮಯದಲ್ಲಿ ರಜಪೂತ ಸಮಾಜದ ಉಪಾಧ್ಯಕ್ಷ ರತನಸಿಂಗ್ ಕೊಕಟನೂರ,ಭರತಸಿಂಗ್ ವಿಜಾಪುರ,ಸುರೇಶ ಹಜೇರಿ, ಭವಾನಸಿಂಗ್ ಹಜೇರಿ, ರಘುರಾಮಸಿಂಗ್ ಹಜೇರಿ,ಜೈಸಿಂಗ್ ಮೂಲಿಮನಿ,ವಿಠಲಸಿಂಗ್ ಹಜೇರಿ (ಬೆಕಿನಾಳ), ರಮೇಶ ಗೌಡಗೇರಿ, ನಾರಾಯಣಸಿಂಗ್ ಕೊಕಟನೂರ, ಅರುಣಸಿಂಗ್ ದಡೇದ ಹಾಗೂ ವಿದ್ಯಾರ್ಥಿನಿಯ ಕುಟುಂಬದ ಸದಸ್ಯರು ಇದ್ದರು.

## ಬೆಳಗಾವಿಯ ಆರ್‌ಎಸ್‌ಎಸ್ ಸಭೆಗೆ ಅಗತ್ಯ ನೆರವು ನೀಡುತ್ತೇವೆ : ಸಚಿವ ಸತೀಶ್ ಜಾರಕಿಹೊಳಿ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಬೆಳಗಾವಿಯಲ್ಲಿ ನಡೆಯುವ ಆರ್–ಎಸ್‌ಎಸ್‌ನ ರಾಷ್ಟ್ರೀಯ ಪ್ರಾಂತ ಪ್ರಚಾರಕರ ಸಭೆಗೆ ಜಿಲ್ಲಾಡಳಿತದಿಂದ ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರು ದಿನಗಳ ಸಮಾವೇಶಕ್ಕೆ ಅಗತ್ಯವಿರುವ ಎಲ್ಲಾ ನೆರವನ್ನು ಜಿಲ್ಲಾಡಳಿತ ನೀಡಲಿದೆ. ಆರ್‌ಎಸ್‌ಎಸ್ ಸಭೆ ನಡೆಸಲು ನಮ ವಿರೋಧ ಇಲ್ಲ ಎಂದು ಹೇಳಿದರು.**

ಸಮಾವೇಶದಲ್ಲಿ ರಾಜಕೀಯ ವಿಚಾರಗಳು ಚರ್ಚೆಯಾಗುವ ಬಗ್ಗೆ ತಮಗೆ ಮಾಹಿತಿ ಇಲ್ಲ. ತಮದು ರಾಜಕೀಯ ಸಂಘಟನೆಯಲ್ಲ, ನಾವು ರಾಜಕೀಯ ಮಾಡುವುದಿಲ್ಲ ಎಂದು ಆರ್‌ಎಸ್–ಎಸ್ ಹೇಳಿಕೊಂಡಿದೆ. ನಾವು ಕಾದು ನೋಡುತ್ತೇವೆ ಎಂದರು. ಆರ್‌ಎಸ್‌ಎಸ್ ಸಮಾವೇಶಕ್ಕೆ ಅನುಮತಿ ನೀಡುವ ಬಗ್ಗೆ ಗೃಹ ಇಲಾಖೆ ನಿರ್ಧಾರ ತೆಗೆದುಕೊಳ್ಳುತ್ತದೆ. ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಆ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ, ತಮಗೂ ಅದಕ್ಕೂ ಸಂಬಂಧವಿಲ್ಲ ಎಂದು ಜಾರಿಕೊಂಡರು. ಕಳೆದ ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆ ಸಂತಸ ಮೂಡಿಸಿದೆ. ಬರಗಾಲ ಎದುರಾಗಬಹುದು, ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು ಎಂಬ



ಆತಂಕಗಳು ನಿವಾರಣೆಯಾಗಿವೆ. ಅಣೆಕಟ್ಟೆಗಳಿಗೆ ನೀರಿನ ಒಳ ಹರಿವು ಹೆಚ್ಚಾಗಿದೆ. ಕೃಷ್ಣ, ಮಲಪ್ರಭ, ಘಟ್ಟಪ್ರಭಾ ನದಿಗಳು ತುಂಬಿ ಹರಿಯುತ್ತಿವೆ. ಹಿಡ್ಕಲ್ ಡ್ಯಾಮ್‌ಗೆ ಇನ್ನೂ ನೀರು ತುಂಬಬೇಕು.

ಮೂರ್ನಾಲ್ಕು ದಿನಗಳಲ್ಲಿ ರಾಜ್ಯದ ಚಿತ್ರಣವೇ ಬದಲಾಗಲಿದೆ. ಬರದ ಛಾಯೆ ಆವ–ರಿಸುತಿತ್ತು. ಉತ್ತಮ ಮಳೆಯಾಗುತ್ತಿರುವುದರಿಂದ ನೀರಿನ ಬವಣೆ ನೀಗುತ್ತಿದೆ. ಮುಂದಿನ ಮೂರ್ನಾಲ್ಕು ದಿನ ಇದೇ ರೀತಿ ಮಳೆ ಸುರಿದರೆ ಒಳ್ಳೆಯದಾಗಲಿದೆ. ರೈತರು ಈಗಾಗಲೇ ಖುಷಿಯಿಂದಿದ್ದಾರೆ ಎಂದರು. ಹಾವೇರಿಯಲ್ಲಿ ಈಗಾಗಲೇ ಮೋಡ ಬಿತ್ತನೆಯಾಗುತ್ತಿದೆ. ಇದನ್ನು ರಾಜ್ಯಾದ್ಯಂತ ನಡೆಸಲು ಮುಖ್ಯಮಂತ್ರಿಯವರ ಮೇಲೆ ಒತ್ತಡ ಹೇರಲಾಗುವುದು ಎಂದು ಹೇಳಿದರು. ತಮ ಆಪ್ತರೊಬ್ಬರು ಬಿಜೆಪಿ ಸೇರಿರುವುದಕ್ಕೆ ಪ್ರತಿಕ್ರಿಯಿಸಿದ ಸತೀಶ್ ಜಾರಕಿಹೊಳಿ ಅವರು, ಸದರಿ ವ್ಯಕ್ತಿ ನಮ ಸಂಪರ್ಕ ಬಿಟ್ಟು ಒಂದು ವರ್ಷವಾಗಿದೆ. ಈಗ ಬೇರೆ ಪಕ್ಷ ಸೇರಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ಕು–ರಿತು ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಈ ವಿಚಾರದಲ್ಲಿ ನಾವು ಏನೂ ಹೇಳಲು ಸಾಧ್ಯವಿಲ್ಲ. ಆದರೆ ಸಂಪುಟ ವಿಸ್ತರಣೆ ಶೀಘ್ರವೇ ನಡೆಯಬೇಕೆಂಬುದು ನಮ ಅಭಿಪ್ರಾಯ ಎಂದರು.

## ನೇಮಕಾತಿ ಪ್ರಕಟಣೆ

### NFSU ನೇಮಕಾತಿ 2026 ? 06 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 27, 2026

NFSU ನೇಮಕಾತಿ 2026: 06 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯವು ಜೂನ್ 2026 ರ NFSU ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಧಾರವಾಡ ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಜುಲೈ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: nfsu.ac.in



❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ತಾಲೂಕಿನ ಲಿಂಗದಳ್ಳಿ ಗ್ರಾಮದಲ್ಲಿ ದಿವಂಗತ ಬಿ.ಆರ್.ಪಾಟೀಲ ಅವರ ಪುಣ್ಯ ಸ್ಮರಣೋತ್ಸವ ನಿಮಿತ್ಯ ಹಮ್ಮಿಕೊಂಡ ಉಚಿತ ಆರೋಗ್ಯ ಶಿಬಿರದಲ್ಲಿ ವೈದ್ಯಕೀಯ ಸೇವೆ ನೀಡಿದ ಬೆಳಗಾವಿ ಲೋಟಸ್ ಆಸ್ಪತ್ರೆಯ ಮುಖ್ಯಸ್ಥರಾದ ಡಾ.ಅನೀಲ ಬಿ.ಪಾಟೀಲ ಹಾಗೂ ಡಾ.ಭರತಗೌಡ ಬಿ.ಪಾಟೀಲ ಅವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಗಣ್ಯರಾದ ಬಸನಗೌಡ ಬಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕಿ ಆರ್.ಬಿ.ದೇಸಾಯಿ, ಶಿಕ್ಷಕರಾದ ಎ.ಎಂ.ಮೂಲಿಮನಿ, ವೈ.ಬಿ.ಬಡಿಗೇರ ಮತ್ತಿತರರು ಇದ್ದರು.

### ಆಷಾಢಕ್ಕೂ ಮುನ್ನ ರಾಜ್ಯ ಸಚಿವ ಸಂಪುಟ ವಿಸ್ತರಣೆಯಾಗಲಿದೆ : ಶಾಸಕ ಷಡಕ್ಷರಿ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಆಷಾಢ ಆರಂಭವಾಗುವ ಮುನ್ನವೇ ರಾಜ್ಯ ಸಚಿವ ಸಂಪುಟ ವಿಸ್ತರಣೆಯಾಗಲಿದೆ ಎಂದು ತಿಪಟೂರು ಕ್ಷೇತ್ರದ ಶಾಸಕ ಷಡಕ್ಷರಿ ಹೇಳಿದ್ದಾರೆ. ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ಕಾರಣಗಳಿಂದಾಗಿ ಸಂಪುಟ ವಿಸ್ತರಣೆ ವಿಳಂಬವಾಗಿದೆ.



ಜುಲೈ 14 ರೊಳಗಾಗಿಯೇ ಸಂಪುಟ ವಿಸ್ತರಣೆಯಾಗಬಹುದು ಎಂಬ ವಿಶ್ವಾಸವಿದೆ. ಒಂದು ವೇಳೆ ಸಾಧ್ಯವಾಗದೇ ಇದ್ದರೆ, ಆಷಾಢ ಬಳಿಕ ಶ್ರಾವಣದಲ್ಲಿ ವಿಸ್ತರಣೆಯಾಗಲಿದೆ ಎಂದು ಹೇಳಿದರು. ಪೂರ್ಣ ಪ್ರಮಾಣದ ಸಂಪುಟ ಇಲ್ಲದೇ ಇರುವುದರಿಂದ ಕೆಲಸ ಮಾಡಲು ಅನಾನುಕೂಲಗಳಾಗುತ್ತಿವೆ. ಸಚಿವರ ಸಂಖ್ಯೆ ಕಡಿಮೆ ಇದೆ, ಖಾತೆಗಳ ಸಂಖ್ಯೆ ಹೆಚ್ಚಿವೆ. ಅನುಭವ ಇರುವ ಶಾಸಕರುಗಳಿರುವುದರಿಂದ ಪರಿಸ್ಥಿತಿಯನ್ನು ನಿಭಾಯಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು. ಸಚಿವ ಸಂಪುಟ ಸೇರಲು ಲಾಬಿ ನಡೆಸುತ್ತಿದ್ದವರು ಯಾವುದೇ ಭಯದಿಂದ ಸುಮನಾಗಿಲ್ಲ, ಸಂಪುಟದಲ್ಲಿ ಅವಕಾಶ ಸಿಗುತ್ತದೆ ಎಂಬ ಕಾರಣಕ್ಕೆ ಎಲ್ಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದೇವೆ ಎಂದು ಹೇಳಿದರು. ಸಂಪುಟಕ್ಕೆ ಯಾರನ್ನೆಲ್ಲಾ ಸೇರಿಸಿಕೊಳ್ಳಬೇಕೆಂಬ ಚರ್ಚೆ ನಡೆದು ತೀರ್ಮಾನವಾಗಿದೆ. ಅದರ ಮಾಹಿತಿ ನಮಗೆ ದೊರೆತ್ತಿದೆ. ಆದರೆ ಅದನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ, ತೆರೆಮರೆಯಲ್ಲಿ ನಮ ಪ್ರಯತ್ನಗಳು ಮುಂದುವರೆದಿವೆ ಎಂದರು. ಬೆಂಗಳೂರು ಸೇರಿದಂತೆ 7 ಜಿಲ್ಲೆಗಳಿಗೆ ಗಣೇಶ್ ಪ್ರಸಾದ್ ಮತ್ತು ತಾವು ಇಬ್ಬರು ಸಮುದಾಯದ ಶಾಸಕರಿದ್ದೇವೆ. ಗಣೇಶ್ ಪ್ರಸಾದ್ ಮೊದಲ ಬಾರಿ ಆಯ್ಕೆಯಾಗಿದ್ದಾರೆ. ನಾನು 40 ವರ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠನಾಗಿ ಕೆಲಸ ಮಾಡುತ್ತಿದ್ದೇನೆ. ಈ ಬಾರಿ ನನಗೆ ಸಂಪುಟದಲ್ಲಿ ಅವಕಾಶ ಸಿಗಲಿದೆ ಎಂಬ ವಿಶ್ವಾಸವಿದೆ ಎಂದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸ್ವಸಹಾಯ ಗುಂಪಿನ ಮಹಿಳೆಯರಿಂದ ತರಕಾರಿ ವಿತರಣೆಗೆ ತಹಶೀಲ್ದಾರ್ ಸತ್ಯಮ್ಮ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಎಸ್ ಎನ್ ಆರ್ ಎಲ್ ಎಂ ಯೋಜನೆಯಡಿ ಸ್ವಸಹಾಯ ಗುಂಪಿನ ಮಹಿಳೆಯರಿಂದ ತರಕಾರಿ ವಿತರಣೆ ಮಾಡುವುದು ಸ್ಲಾಘನೀಯ ಎಂದು ತಹಶೀಲ್ದಾರ ಸತ್ಯಮ್ಮ ಹೇಳಿದರು.

ಅವರಿಂದು ತಾಲೂಕಿನ ರೋಡಲಬಂಡಾ(ಯುಕೆಪಿ) ಒಕ್ಕೂಟದ ವ್ಯಾಪ್ತಿಯ ಚಿಕ್ಕಉಪ್ಪೇರಿ ಪ್ರಾಥಮಿಕ ಶಾಲೆಯಲ್ಲಿ ಸ್ವಸಹಾಯ ಗುಂಪಿನ ಮಹಿಳೆಯರಿಂದ ತರಕಾರಿ ವಿತರಣೆಗೆ ತಹಸೀಲ್ದಾರ್ ಸತ್ಯಮ್ಮ ಚಾಲನೆ ನೀಡಿ ಮಾತನಾಡಿದ ಅವರು, ಸ್ವ ಸಹಾಯ ಗುಂಪಿನ ಮಹಿಳೆಯರು ತಮ್ಮ ತೋಟದಲ್ಲಿ ಬೆಳೆದ ತರಕಾರಿ ನೀಡುವುದು ಶಾಲಾ ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರವನ್ನು ಒದಗಿಸುವನಂತೆ ಆಗುತ್ತಿದೇ, ತರಕಾರಿ ಮತ್ತು ಹಣ್ಣುಗಳ ಸರಬರಾಜನ್ನು ನಿಯಮಾನುಸಾರ ಪೂರೈಸಲು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದು ಅವರ ಆದೇಶದಂತೆ ಜಿಲ್ಲಾದ್ಯಂತ ಸ್ವ ಸಹಾಯ ಗುಂಪಿನ ಮಹಿಳೆಯ–ರಿಗೆ ಆರ್ಥಿಕವಾಗಿ ಸಬಲರಾಗಲು ದೊಡ್ಡ ಅವಕಾಶ ತಾಲೂಕಿನ ಎಲ್ಲಾ ಮಹಿಳೆಯರು ಸದುಪಯೋಗ ಪಡೆದುಕೊಳ್ಳಬೇಕು ಸರ್ಕಾರಿ ಪ್ರಾಥಮಿಕ ಪ್ರೌಢ ಶಾಲೆಗಳಿಗೆ ಸ್ವ ಸಹಾಯ ಗುಂಪಿನ ಮಹಿಳೆಯರು ತಮ್ಮ ತೋಟದಲ್ಲಿ ಬೆಳೆದ ಸೌತೆಕಾಯಿ, ಬೆಂಡೆಕಾಯಿ, ಹಾಗಲ, ನುಗ್ಗೆಕಾಯಿ, ಕೋತಂಬರಿ, ಕ–ರಿಬೇವು, ಪಾಲಕ, ಹುಂಚಿಕ್, ಕುಂಬಳಕಾಯಿ, ಬದನೆಕಾಯಿ, ಹೂಕೋಸು ಕೊಡಲು ಗುಂಪಿನ ಮಹಿಳೆಯರು ಮುಂದಾಗಿದ್ದು, ಇದರಿಂದ ನೇರ ಆದಾಯ, ನಿರಂತರ ಕೆಲಸ, ಬ್ಯಾಂಕ್ ವ್ಯವಹಾರ, ಸ್ವಾವಲಂಬನೆ ನಾನೂ ಸಂಪಾದನೆ ಮಾಡ್ತೀನಿ ಅನ್ನೋ ಆತ್ಮವಿಶ್ವಾಸ, ಕೌಶಲ್ಯ, ಸಾಮಾಜಿಕ ಗೌರವ, ಉಳಿತಾಯ, ಸಮಯಕ್ಕೆ ಸರಿಯಾಗಿ ಹಣ ಸಿಗುವುದು, ಆರ್ಥಿಕ ಮತ್ತು ಸಾಮಾಜಿಕ ಎರಡರಲ್ಲೂ ಸಬಲರಾಗಲೂ ಅನುಕೂಲ ತಮ್ಮ ಕುಟುಂಬಕ್ಕೆ ಸಹಾಯ ಮಾಡಿ, ಸ್ವತಂತ್ರರಾಗಿ ಬದುಕ ಬಹುದು, ಸರಕಾರಿ ಮಹತ್ವದ ಯೋಜನೆಗೆ ಮುಖ್ಯಶಿಕ್ಷಕರು, ಶಾಲಾ ಸುಧಾರಣಾ ಸಮಿತಿ ಸದಸ್ಯರು, ಗ್ರಾಮಸ್ಥರು ಸಹಕಾರ ನೀಡುವಂತೆ ಮನವಿ ಮಾಡಿದರು.



ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷರು ಸರ್ವೇಶ್ವರಿ ಹಿರೇಮಠ, ಶಾಲೆ ಮುಖ್ಯ ಗುರುಗಳು ಶಂಕರಗೌಡ, ರತ್ನಸಿಂಗ್ ರಾಠೋಡ, ಈರಪ್ಪ, ಕಾರ್ಯದರ್ಶಿ ಪಾರ್ವತೆಮ್ಮ, ಎಂಬಿಕೆ ಜ್ಯೋತಿ ರಾಠೋಡ್, ಸಿಬ್ಬಂದಿಗಳು ದೀಪಾ, ಸುನೀತಾ, ಶಾರದಾ ಹಾಗೂ ಸ್ವ ಸಹಾಯ ಗುಂಪಿನ ಸದಸ್ಯರು ಇದ್ದರು.

# ಮುಳ್ಳೂರುಕ್ಯಾಂಪ್ ಇ.ಜೆ.ಸರ್ಕಾರಿ ಶಾಲೆ ದತ್ತು ಪಡೆದ ಜಿ.ಕೆ.ವಿಶ್ವನಾಥ ಚೌಧರಿ



❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜು.7ರಂದು ಗೋಡಿತಿ ನಾಗೇಶ್ವರನಾಥ್ ಚಾರಿಟೇಬಲ್ ಟ್ರಸ್ಟ್ ಸಿಂಧನೂರು ವತಿಯಿಂದ ಮುಳ್ಳೂರು ಕ್ಯಾಂಪಿನ ಸರಕಾರಿ ಶಾಲೆಯಲ್ಲಿ ವಿಶ್ವನಾಥ್ ಚೌದ್ರಿ ಅವರ ಮಗ ದಿವಂಗತ ನಾಗೇಶ್ವರ ನಾಥ್ ಚೌಧರಿ ಪುಣ್ಯ ಸ್ಮರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣೆ ಮಾಡಲಾಯಿತು.

ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ ಮಾತನಾಡಿ, ಗೋಡೆತಿ ವಿಶ್ವನಾಥ್ ಅವರ ಮಗನ ನೆನಪಿಗಾಗಿ ಈ ಸರ್ಕಾರಿ ಶಾಲೆಯನ್ನು ದತ್ತು ಪಡೆದುಕೊಂಡು. ಶಾಲೆಯ ಮೂಲಭೂತ ಸೌಕರ್ಯಗಳನ್ನು ಪೂರೈಸುವ ಮೂಲಕ ಶಾಲೆಯ ಅಭಿವೃದ್ಧಿಗೆ ಅತ್ಯುತ್ತಮ ಮಾನವೀಯ ಕೆಲಸವನ್ನು ಮಾಡಿದ್ದಾರೆ. ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳು ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿವೆ.

ಸರ್ಕಾರದ ನಿರ್ಲಕ್ಷ್ಯ ಹಾಗೂ ಪಾಲಕರಲ್ಲಿರುವ ಇಂಗ್ಲಿಷ್ ಭಾಷೆಯ ವ್ಯಾಮೋಹದಿಂದಾಗಿ ಹಲವು ಸರ್ಕಾರಿ ಶಾಲೆಗಳು ಮುಚ್ಚುವ ಹಂತಕ್ಕೆ ತಲುಪಿವೆ. ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಸುಮಾರು 50% ನಷ್ಟು ಶಿಕ್ಷಕರ ಕೊರತೆಯಿದೆ. ಭಾರಿ ಸಂಖ್ಯೆಯ ಶಾಲೆಗಳು ಕೇವಲ ಒಬ್ಬರೇ ಶಿಕ್ಷಕರಿಂದ ನಡೆಯುತ್ತಿದ್ದು, ಅತಿಥಿ ಶಿಕ್ಷಕರ ಮೇಲೆ ಶಿಕ್ಷಣ ಸಂಸ್ಥೆಗಳು ಅವಲಂಬಿತವಾಗಿವೆ. ಇಂಗ್ಲಿಷ್ ಶಿಕ್ಷಣದ ಅಗತ್ಯತೆ ಖಾಸಗಿ ಶಾಲೆಗಳ ಮಾದರಿಯಲ್ಲಿಯೇ ಸರ್ಕಾರಿ ಶಾಲೆಗಳಲ್ಲೂ ಇಂಗ್ಲಿಷ್ ಕಲಿಸಬೇಕು ಎಂಬ ಆದೇಶವಿದ್ದರೂ, ಇಂಗ್ಲಿಷ್ ಮಾಧ್ಯಮದಲ್ಲಿಯೇ ಓದಿರುವ ಅರ್ಹ ಶಿಕ್ಷಕರು ಇಂಗ್ಲಿಷ್ ಭಾಷೆಯನ್ನು ಕಲಿಸಿದರೆ ಮಕ್ಕಳಿಗೆ ಹೆಚ್ಚು ಅನುಕೂಲವಾಗುತ್ತದೆ. ಬಡ ಕುಟುಂಬಗಳ ಮಕ್ಕಳು ಇಂದಿಗೂ ಅನಿವಾರ್ಯವಾಗಿ ಸರ್ಕಾರಿ ಶಾಲೆಗಳನ್ನೇ ಆಶ್ರಯಿಸಿದ್ದಾರೆ. ಆದ್ದರಿಂದ ಈ ಶಾಲೆಗಳು ಜೀವಂತವಾಗಿ ಉಳಿಯಬೇಕಾದರೆ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಜಾಗೃತರಾಗಬೇಕು ಮತ್ತು ಶಾಲಾ ಸುಧಾರಣಾ ಸಮಿತಿಗಳು ಶಿಕ್ಷಕರಿಗೆ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ: ಮುಖಂಡರಾದ ಬಿ.ಹರ್ಷ, ವಿಶ್ವನಾಥ ಚೌದ್ರಿ, ದೇವರಾಜ ಪಾಟೀಲ್, ಸುರೇಶ ನೆಕ್ಕಂಟಿ, ವಂಶಿಕೃಷ್ಣ, ಬಸವರಾಜ ಸಾಲಗುಂದಾ, ಅಮರೇಗೌಡ ಮಲ್ಲಾಪುರ, ಅಜಯ್ ದಾಸರಿ, ಪತ್ರಕರ್ತ ಸಂಘದ ಪ್ರಧಾನ ಕಾರ್ಯದರ್ಶಿ ಅಮರೇಶ ಅಲಬನೂರು, ಮುಖ್ಯ ಗುರು ಆದಪ್ಪ ಸಾಬಣ್ಣ ವಗ್ಗರ್, ಅಕ್ಷರ ದಾಸೋಹ ಅಧಿಕಾರಿಗಳು, ನಾಗಪ್ಪ ಸಿಆರ್.ಪಿ, ಷಣ್ಮುಖಗೌಡ ಸಿ.ಆರ್.ಪಿ, ಶೇಷರಾವ್ ಮುಳ್ಳೂರು ಕ್ಯಾಂಪ್, ಅಮರೇಶಗೌಡ ಗ್ರಾಮ ಪಂಚಾಯತಿ ಸದಸ್ಯರು, ಆದೇಶ ಶಾಲೆಯ ಮುಖ್ಯ ಗುರುಗಳು, ಉಪಸ್ಥಿತರಿದ್ದರು.

# ಲೋಕೋಪಯೋಗಿ ಇಲಾಖೆ ಅಧಿಕಾರಿ ಇಇ ವೆಂಕಟೇಶ ಮೇಲಿನ ಆರೋಪ ಶುದ್ಧ ಸುಳ್ಳು: ಆಂಜನೇಯ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಲೋಕೋಪಯೋಗಿ ಇಲಾಖೆಯ ಅಧಿಕಾರಿಯಾದ ಇಇ ವೆಂಕಟೇಶ ಗಲಗ ಇವರ ಮೇಲೆ ವಿನಾಕಾರಣ ಪತ್ರಿಕಾ ಮಾಧ್ಯಮ ಹಾಗೂ ಮೀಡಿಯಾದಲ್ಲಿ ಮತ್ತು ಸಾಮಾಜಿ–ಕ ಜಾಲತಾಣಗಳಲ್ಲಿ ಇವರ ಹೆಸರಿಗೆ ಮಸಿ ಬಡಿಯುವಂತಹ ಕೆಲಸಗಳು ಆಗುತ್ತಿವೆ. ವಿನಾಕಾರಣ ಕಿರುಕುಳ ನೀಡುವುದರ ಜೊತೆಗೆ ಕೆಲಸದ ಮೇಲೆ ಒತ್ತಡ ಏರಿ, ಅಧಿಕಾರದಿಂದ ಕೆಳಗಿಳಿಸಬೇಕೆಂಬ ಉದ್ದೇಶದಿಂದ ಆರೋಪ ಮಾಡುತ್ತಿದ್ದಾರೆ ಎಂದು ಆಂಜನೇಯ ಹೇಳಿದರು.




ನಗರದ ಪತ್ರಿಕಾ ಭವನದಲ್ಲಿ ಜು.7 ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಇಲ್ಲ ಸಲ್ಲದ ಆರೋಪ ಮಾಡುತ್ತಾ, ಹಿಂದುಳಿದ ವರ್ಗದ ವ್ಯಕ್ತಿ ಉನ್ನತ ಹುದ್ದೆಯಲ್ಲಿರುವುದನ್ನ ಸಹಿಸಿಕೊಳ್ಳದೆ, ಉದ್ದೇಶ ಪೂರ್ವಕವಾಗಿ ಇವರನ್ನು ತೇಜೋವಧೆ ಮಾಡುವಂತಹ ಕೆಲಸ ನಡೆಯುತ್ತಿದೆ. ಯಾವುದೇ ಒಂದು ಟೆಂಡರ್ ಕರೆಯಲು ಸಂಬಂಧಪಟ್ಟ ಕಾಮಗಾರಿ ಪ್ರಮಾಣ ಪತ್ರ ಹಾಗೂ ಇನ್ನಿತರೆ ದಾಖಲಾತಿಗಳನ್ನು ತಾಂತ್ರಿಕವಾಗಿ ಕೆಳಹಂತದ ಅಧಿಕಾರಿಗಳಿಂದ ಹಿಡಿದು, ಮೇಲಿನ ಅಧಿಕಾರಿಗಳವರೆಗೆ ಪರಿಶೀಲನೆ ಮಾಡುವ ಅಧಿಕಾರ ಇರುತ್ತದೆ.

ಆದರೆ ಇಇ ವೆಂಕಟೇಶ ಗಲಗ ಇವರನ್ನು ಮಾತ್ರ ಟಾರ್ಗೆಟ್ ಮಾಡಿದ್ದು, ಅನುಮಾನ ಮೂಡಿಸಿದೆ, ಜವಾಬ್ದಾರಿ ಸ್ಥಾನದಲ್ಲಿರುವ ಇವರು ರಾಜಕೀಯವಾಗಿ, ಸಾಮಾಜಿಕವಾಗಿ, ಕೆಲಸ ಮಾಡುತ್ತಾ ಬಂದಿದ್ದಾರೆ. ತಮ್ಮ ಕೆಲಸದಲ್ಲಿ ಶಿಸ್ತು ರೂಢಿಸಿಕೊಂಡು ಕೆಲಸ ನಿರ್ವಹಿಸುವ ಇವರ ಮೇಲೆ ಮಾಡಿದ ಆರೋಪ ಸತ್ಯಕ್ಕೆ ದೂರವಾದದು ಎಂದರು.

ಈ ಸಂದರ್ಭದಲ್ಲಿ: ಆಂಜನೇಯ ರಾಗಲಪರ್ವಿ, ಹುಸೇನಪ್ಪ, ನಾರಾಯಣಸ್ವಾಮಿ ದುಮತಿ, ಮೌನೇಶ ನಾಯಕ, ಮಹಾದೇವಪ್ಪ ದುಮತಿ, ಬಸವರಾಜ ಕೆಸರಟ್ಟಿ, ಚಂದ್ರಶೇಖರ ಯಾಪಲಪರ್ವಿ, ಪಾವಯ್ಯ ಮನುಸೂರು, ದೇವೇಗೌಡ ಉದ್ಬಾಳ, ಸೇರಿದಂತೆ ಅನೇಕರಿದ್ದರು.

# ಬಾರದ ಮಳೆ ಬಾಡಿದ ಬೆಳೆ ಮೋಡದತ್ತ ಮುಖ ಮಾಡಿದ ಅನ್ನದಾತ

## ಮಳೆ ಕೊರತೆಯಿಂದ ಮುಂಗಾರು ಬೆಳೆ ಒಣಗುವ ಆತಂಕ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನಾದ್ಯಂತ ಮುಂಗಾರು ಮಳೆಯನ್ನು ನಂಬಿಕೊಂಡು ಕೃಷಿ ಆರಂಭಿಸಿದ ರೈತರು ಇದೀಗ ಮಳೆ ಕೊರತೆಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ದಲಾಲಿ ಅಂಗಡಿಗಳಿಂದ ಸಾಲ ಪಡೆದು, ಟ್ರ್ಯಾಕ್ಟರ್ ಹಾಗೂ ಎತ್ತುಗಳ ಮೂಲಕ ಭೂಮಿಯನ್ನು ಹದಗೊಳಿಸಿ, ಕಳೆದ ತಿಂಗಳು ಸುರಿದ ಅಲ್ಪಸ್ವಲ್ಪ ಮಳೆಯನ್ನು ನಂಬಿ ವಿವಿಧ ಬೆಳೆಗಳನ್ನು ಬಿತ್ತನೆ ಮಾಡಿದ್ದ ರೈತರು, ಈಗ ಬೆಳೆಗಳು ಒಣಗುತ್ತಿರುವುದನ್ನು ಕಂಡು ಆತಂಕಕ್ಕೊಳಗಾಗಿದ್ದಾರೆ.



ಲಕ್ಷಾಂತರ ರೂಪಾಯಿ ಆದಾಯದ ನಿರೀಕ್ಷೆಯೊಂದಿಗೆ ಬಿತ್ತನೆ ಮಾಡಿದ ಬೆಳೆಗಳು ಮಳೆ ಕೊರತೆಯಿಂದ ಬಾಡುತ್ತಿದ್ದು, ರೈತರ ಮುಖದಲ್ಲಿ ಕಳೆ ತಪ್ಪಿದೆ. ಆಕಾಶದಲ್ಲಿ ಮೋಡಗಳು ಕಾಣಿಸಿಕೊಂಡರೂ ಮಳೆ ಸು–ರಿಯದೆ ಕರಗುತ್ತಿರುವುದು ಬರಗಾಲದ ಭೀತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಹವಾಮಾನ ತಜ್ಞರ ಮುನ್ಸೂಚನೆಯೂ ಮಳೆ ಕೊರತೆಯ ಸಾಧ್ಯತೆಯನ್ನು ಸೂಚಿಸಿರುವುದ–ರಿಂದ ರೈತರಲ್ಲಿ ಆತಂಕ ಮನೆಮಾಡಿದೆ.


ಕೂಲಿ ಮಾಡಿ ಬದುಕು ಸಾಗಿಸುವ ಸಣ್ಣ ಹಾಗೂ ಅತಿಸಣ್ಣ ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಕ್ಷಣ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ಬೆಳೆ ಸಾಲ ಮನ್ನಾ, ಬೆಳೆ ನಷ್ಟ ಪರಿಹಾರ, ಮೋಡ ಬಿತ್ತನೆ ಸೇ–ರಿದಂತೆ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹ ವ್ಯಕ್ತವಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಉತ್ತಮ ಮಳೆಯಾಗಲೆಂದು ರೈತರು, ಯುವಕರು ಹಾಗೂ ವಿವಿಧ ಸಂಘಟನೆಗಳು ವಿಶೇಷ ಪೂಜೆ, ಭಜನೆ ಮತ್ತು ಸಂಪ್ರದಾಯಬದ್ಧ ಆಚರಣೆಗಳ ಮೂಲಕ ವರುಣ ದೇವರ ಮೊರೆ ಹೋಗುತ್ತಿದ್ದಾರೆ. "ಇನ್ನಾದರೂ ರಾಜ್ಯದಾದ್ಯಂತ ಉತ್ತಮ ಮಳೆ ಸುರಿದು ಭೂಮಿ ತಂಪಾಗಿ, ಬೆಳೆಗಳು ಸಮೃದ್ಧವಾಗಿ ಬೆಳೆಯಲಿ. ಸಂಕಷ್ಟದಲ್ಲಿರುವ ರೈತ ಕುಟುಂಬಗಳು ಆರ್ಥಿಕವಾಗಿ ಚೇತ–ರಿಸಿಕೊಳ್ಳುವಂತಾಗಲಿ" ಎಂಬುದು ರೈತ ಬಸವರಾಜ ಜಿಗೇರಿ ಕಡೇಕೊಪ್ಪ ಹಾಗೂ ಸಾರ್ವಜನಿಕರ ಆಶಯವಾಗಿದೆ.

# ಜಿಪಿಎಸ್ ಕಡ್ಡಾಯ, ಗಡಿ ಚೆಕ್‌ಪೋಸ್ಟ್ ವಿರೋಧಿಸಿ ಆ. 1ರಿಂದ ಸೌತ್ ಇಂಡಿಯಾ ಲಾರಿ ಮುಷ್ಕರದ ಎಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಜಿಪಿಎಸ್‌ಪ್ಯಾನಿಕ್ ಬಟನ್ ಕಡ್ಡಾಯ, ಗಡಿ ಚೆಕ್‌ಪೋಸ್ಟ್‌ಗಳು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಆಗಸ್ಟ್ 1ರಿಂದ ದಕ್ಷಿಣ ಭಾರತದಾದ್ಯಂತ ಲಾರಿಗಳನ್ನು ಸ್ಥಗಿ–ತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಸೌತ್ ಇಂಡಿಯಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿ.ಆರ್.ಷಣ್ಮುಗಪ್ಪ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರ್ಭಯ ಪ್ರಕರಣದ ಬಳಿಕ 2012ರಲ್ಲಿ ಕೇಂದ್ರ ಸರ್ಕಾರ ವಾಣಿಜ್ಯ ವಾಹನಗಳಿಗೂ ಜಿಪಿಎಸ್ ಹಾಗೂ ಪ್ಯಾನಿಕ್ ಬಟನ್ ಕಡ್ಡಾಯಗೊಳಿಸಿತು. ಆದರೆ ಇದರ ಅನುಷ್ಠಾನದಲ್ಲಿ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿದರು. ಒಂದು ರಾಜ್ಯದಲ್ಲಿ ಜಿಪಿಎಸ್‌ಪ್ಯಾನಿಕ್ ಬಟನ್



ಅಳವಡಿಕೆಗೆ 3 ಸಾವಿರ, ಮತ್ತೊಂದು ರಾಜ್ಯದಲ್ಲಿ 15 ಸಾವಿರ ವಸೂಲಿ ಮಾಡಲಾಗುತ್ತಿದೆ.

ಸರಕು ಸಾಗಣೆ ವಾಹನಗಳಿಗೆ ಈ ವ್ಯವಸ್ಥೆಯ ಅಗತ್ಯವಿಲ್ಲ. ಪ್ರಯಾಣಿಕರ ವಾಹನಗಳಲ್ಲಿ ಈಗಾಗಲೇ ಅಳವಡಿಸಲಾಗಿದ್ದರೂ ಇದುವರೆಗೆ ಯಾವುದೇ ಅಹಿತಕರ ಘಟನೆಗಳನ್ನು ತಡೆಯುವಲ್ಲಿ ಅದರ ಪರಿಣಾಮಕಾರಿತ್ವವನ್ನು ಸರ್ಕಾರಗಳು ಪರಿಶೀಲಿಸಿಲ್ಲ ಎಂದು ಹೇಳಿದರು.

ಯಾವುದೇ ಕಾರಣಕ್ಕೂ ವಾಣಿಜ್ಯ ಸರಕು ಸಾಗಣೆ ವಾಹನಗಳಿಗೆ ಜಿಪಿಎಸ್ ಮತ್ತು ಪ್ಯಾನಿಕ್ ಬಟನ್ ಕಡ್ಡಾಯ ಬೇಡ ಎಂಬುದು ನಮ ಸಂಘದ ತೀರ್ಮಾನ ಎಂದು ತಿಳಿಸಿದರು. ಗಡಿ ಚೆಕ್‌ಪೋಸ್ಟ್‌ಗಳ ವಿಷಯ ಪ್ರಸ್ತಾಪಿಸಿದ ಅವರು, ಬಿಜೆಪಿ ಆಡಳಿತವಿರುವ ಹಲವು ರಾಜ್ಯಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಲಾಗಿದೆ. ತೆಲಂಗಾಣದಲ್ಲಿ ಆರು ತಿಂಗಳ ಹಿಂದೆ ಹಾಗೂ ಆಂಧ್ರಪ್ರದೇಶದಲ್ಲಿ ಸುಮಾರು ಒಂದೂವರೆ ವರ್ಷದ ಹಿಂದೆ ಅವುಗಳನ್ನು ತೆಗೆದುಹಾಕಲಾಗಿದೆ. ಆದರೆ ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಮಾತ್ರ ಇನ್ನೂ ಚೆಕ್‌ಪೋಸ್ಟ್‌ಗಳು ಮುಂದುವರಿದಿವೆ ಎಂದು ಆರೋಪಿಸಿದರು. ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಕೂಡಲೇ ಗಡಿ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಬೇಕು. ರಾಜ್ಯದ ನೂತನ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರು ಈ ಕುರಿತು ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜುಲೈ 30ರೊಳಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲವಾದರೆ ಆಗಸ್ಟ್ 1ರಿಂದ ದಕ್ಷಿಣ ಭಾರತದ ಎಲ್ಲಾ ಲಾರಿಗಳು ನಿಂತಲ್ಲೇ ನಿಲ್ಲಲಿವೆ ಎಂದು ಎಚ್ಚರಿಕೆ ನೀಡಿದರು.ದಕ್ಷಿಣ ಭಾರತದಲ್ಲಿ ಸುಮಾರು 24 ಲಕ್ಷ ಲಾರಿಗಳಿದ್ದು, ಕರ್ನಾಟಕದಲ್ಲೇ 7 ಲಕ್ಷ ಲಾರಿಗಳಿವೆ. ಈ ಮುಷ್ಕರದಲ್ಲಿ ದಕ್ಷಿಣ ಭಾರತದ ಎಲ್ಲಾ ಲಾರಿಗಳು ಭಾಗವಹಿಸಲಿವೆ ಎಂದು ಷಣುಗಪ್ಪ ತಿಳಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಇಂಟರ್ನೆಟ್ ಆಫ್ ಥಿಂಗ್ಸ್ (IOT) ಕೋರ್ಸ್ ಎಲೆಕ್ಟ್ರಾನಿಕ್ಸ್,

ಸೆನ್ಸಾರ್‌ಗಳು ಮತ್ತು ಡೇಟಾ ಕಮ್ಯುನಿಕೇಶನ್‌ನ ಸಂಪೂರ್ಣ ವಿವರಗಳನ್ನು ಒಳಗೊಂಡಿದೆ. ಪ್ರಮುಖ ಕೋರ್ಸ್‌ನ ಉದ್ದೇಶವು ದೈನಂದಿನ ವಸ್ತುಗಳನ್ನು ಇಂಟರ್ನೆಟ್‌ಗೆ ಸಂಪರ್ಕಿಸಿ, ಅವುಗಳನ್ನು ಸ್ವಯಂಚಾಲಿತವಾಗಿ ನಿಯಂತ್ರಿಸುವುದನ್ನು ಕಲಿಯುವುದು. ಇದು ಸಾಫ್ಟ್‌ವೇರ್, ಪ್ರೋಗ್ರಾಮಿಂಗ್ ಮತ್ತು ನೆಟ್‌ವರ್ಕಿಂಗ್ ಅಂಶಗಳನ್ನು ಒಳಗೊಂಡಿರುತ್ತದೆ.ಕೋರ್ಸ್‌ನಲ್ಲಿ ನೀವು ಕಲಿಯುವ ಪ್ರಮುಖ ವಿಷಯಗಳು (Syllabus)ಪ–ರಿಚಯ ಮತ್ತು ಪದರಗಳು (IoT Basics & Architecture): ಖಂಖ ಎಂದರೇನು, ಅದರ ವಿಧಗಳು ಮತ್ತು ಕ್ಲೌಡ್ ಕನೆಕ್ಟಿವಿಟಿ. ಹಾರ್ಡ್‌ವೇರ್ ಮತ್ತು ಸೆನ್ಸಾರ್‌ಗಳು (Sensors & Devices): ತಾಪಮಾನ, ತೇವಾಂಶ ಮತ್ತು ಗ್ಯಾಸ್ ಸೆನ್ಸಾರ್‌ಗಳನ್ನು ಅರ್ಥ–ರ್ಮಾಡಿಕೊಳ್ಳುವುದು. Arduino ªAÄvÀÄÛ Raspberry Pi ಮೈಕ್ರೋಕಂಟ್ರೋಲರ್‌ಗಳ ಬಳಕೆ.ಪ್ರೋಗ್ರಾಮಿಂಗ್ (Programming): ಸಾಧನಗಳನ್ನು ನಿಯಂತ್ರಿಸಲು C, C++ ಅಥವಾ Python ಭಾಷೆಗಳನ್ನು ಕಲಿಯುವುದು.ಕ್ಲೌಡ್ ಮತ್ತು ಡೇಟಾ (Cloud Computing & Analytics): ಇಂಟರ್ನೆಟ್ ಮೂಲಕ ಸಂಗ್ರಹಿಸಿದ ಡೇಟಾವನ್ನು ಹೇಗೆ ವಿಶ್ಲೇಷಿಸುವುದು ಮತ್ತು ರಿಮೋಟ್‌ನಲ್ಲಿ ಸಾಧನಗಳನ್ನು ನಿಯಂತ್ರಿಸುವುದು.ಭದ್ರತೆ (Security): ಖಂಖ ನೆಟ್‌ವರ್ಕ್‌ಗಳನ್ನು ಹ್ಯಾಕರ್‌ಗಳಿಂದ ಹೇಗೆ ರಕ್ಷಿಸುವುದು ಎಂಬ ತಂತ್ರಗಳು.ಕೋರ್ಸ್‌ನ ಅವಧಿ ಮತ್ತು ಅರ್ಹತೆಅವಧಿ: ಕೋರ್ಸ್‌ನ ಅವಧಿಯು 60 ಗಂಟೆಗಳಿಂದ ಹಿಡಿದು 6 ತಿಂಗಳವರೆಗೆ ಅಥ–ವಾ ಅದಕ್ಕಿಂತ ಹೆಚ್ಚಿನದಾಗಿರಬಹುದು.ಅರ್ಹತೆ: ವಿಜ್ಞಾನ (BSc), ಕಂಪ್ಯೂಟರ್ ಸೈನ್ಸ್ (BCA/BTech) ಅಥವಾ ಎಲೆಕ್ಟ್ರಾನಿಕ್ಸ್ ಹಿನ್ನೆಲೆ ಇರುವವರು ಈ ಕೋರ್ಸ್ ಮಾಡಲು ಸೂಕ್ತರು. ಕಲಿಯಲು ಉತ್ತಮ ಆನ್‌ಲೈನ್ ಸಂಪನ್ಮೂಲಗಳುಉಚಿತ ಮತ್ತು ಪ್ರಮಾಣೀಕೃತ ಕೋರ್ಸ್‌ಗಳು: ನೀವು Skill India Digital Hub ನಿಂದ IoT-Network Specialist Certificate Programme 60–ಗಂಟೆಗಳ ನೆಟ್‌ವರ್ಕ್ ಸ್ಪೆಷಲಿಸ್ಟ್ ಕೋರ್ಸ್ ಅನ್ನು ಪರಿಶೀಲಿಸಬಹುದು.ಕನ್ನಡದಲ್ಲಿ ಕಲಿಯಲು: ಕನ್ನಡದಲ್ಲೇ ಬೇಸಿಕ್ ಮಾಹಿತಿ ಮತ್ತು ಕೈಗಾರಿಕಾ IoT (IIoT) ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು Internet of Things Explained in Kannada ªAÄvÀÄÛ Smart Factories Explained in Kannada ವೀಕ್ಷಿಸಬಹುದು.ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು: IoT (Internet of Things) Crash Course ಮತ್ತು Shiksha IoT Courses ಮೂಲಕ ಹೆಚ್ಚಿನದನ್ನು ಕಲಿಯಬಹುದು.

## ರೈತರ ಬಲವರ್ಧನೆಗೆ ಸಹಕಾರ ಸಂಘಗಳು ಶಕ್ತಿ ಕೇಂದ್ರ: ದೊಡ್ಡನಗೌಡ ಪಾಟೀಲ

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಹಾಗೂ ರೈತರ ಸರ್ವಾಂಗೀಣ ಅಭಿವೃದ್ಧಿಗೆ ವಿವಿಧೋದ್ದೇಶ ಪ್ರಾಥ–ಮಿಕ ಗ್ರಾಮೀಣ ಕೃಷಿ ಸಹಕಾರ ಸಂಘಗಳು ಶಕ್ತಿ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ ಎಂದು ಶಾಸಕ ಹಾಗೂ ಬ್ಯಾಲಿಹಾಳ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ದೊಡ್ಡನಗೌಡ ಪಾಟೀಲ ಹೇಳಿದರು.




ತಾಲೂಕಿನ ಬ್ಯಾಲಿಹಾಳ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಪ್ರಥಮ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಸಂಘದ ಮೂಲಕ ರೈತ–ರಿಗೆ ದೊರೆಯುವ ಸಾಲ ಹಾಗೂ ಇತರ ಸೌಲಭ್ಯಗಳನ್ನು ಪಾರದರ್ಶಕವಾಗಿ ಮತ್ತು ಪ್ರಾಮಾಣಿಕವಾಗಿ ಒದಗಿಸಲು ಆಡಳಿತ ಮಂಡಳಿ ಬದ್ಧವಾಗಿದೆ. ಸಂಘದ ಏಳಿಗೆ ಮತ್ತು ರೈತರ ಹಿತಾಸಕ್ತಿಗಾಗಿ ನಿರಂತರವಾಗಿ ಶ್ರಮಿಸಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ರಾಮಣ್ಣ ಬಡಿಗೇರ, ನಿರ್ದೇಶಕರಾದ ಭೀಮನಗೌಡ ಪಾಟೀಲ, ಶಿವಾನಂದಯ್ಯ ಗುರವಿನ್, ಸಂಗಣ್ಣ ಕರಡಿ, ಶರಣಪ್ಪ ಶಿರಿವಾರ, ಕಲ್ಲಪ್ಪ ಹಿರೇಮನಿ, ಹನುಮಂತ ಕನಕಗಿರಿ, ಇಂದ್ರಮ್ಮ ಡೊಣ್ಣಿನ ಹಾಗೂ ಪ್ರಭಾರಿ ಸಿಇಒ ಬಸವರಾಜ ನೀರಲಗಿ ಸೇರಿದಂತೆ ಸಂಘದ ಸದಸ್ಯರು, ರೈತರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

## ರಟಕಲ್ ಬಂಕನಾಥನ ಮಂದಿರದಲ್ಲಿ,ಮಳೆಗಾಗಿ ಏಕ್ತಾರಿ ಸಪ್ತ ಭಜನೆ ಏಳು ದಿನ.

ನೈಜ್ಯ ದೆಸೆ ನ್ಯೂಸ್

ಕಾಳಗಿ: ತಾಲೂಕಿನ ರಟಕಲ್ ಗ್ರಾಮದ ರೈತರು ಮಳೆ ಬರದ ಕಾರಣ ಗ್ರಾಮದ ಬಂಕನಾಥೇಶ್ವರ ಮಂದಿರದಲ್ಲಿ 7ದಿನ ಏಕ್ತರಿ ಸಪ್ತಹ ಭಜನೆಯನ್ನು ಸಾನಿಧ್ಯ ಪರಮ ಪೂಜ್ಯಶ್ರೀ ರೇವಣಸಿದ್ದ ಶಿವಾಚಾರ್ಯರು, ಹಾಗೂ ಮುರುಗೇಂದ್ರ ಮಹಾಸ್ವಾಮಿಗಳು, ಹಾಗೂ ಕಮಿಟಿ ಅವರನೇತೃತ್ವದಲ್ಲಿ ನಡೆದು ಇಂದು ಪ್ರಾರಂಭಗೊಂಡಿದೆ ಅದರ ಪ್ರಯುಕ್ತ ರಟಕಲ್ ಗುಡ್ಡದಿಂದ ಶ್ರೀ ರೇವಣಸಿದ್ದೇಶ್ವರನಿಗೆ ಮಹಾಭಿಷೇಕ ಮಾಡಿ ರಟಕಲ್ ಗುಡ್ಡದಿಂದ ಮಾಯಮರ್ತಪ್ಪ ತ್ರಿಶೂಲ ಹಾಗೂ ಬಾಜಾ ಭಜಂತ್ರಿ ಡೊಳ್ಳು ನೊಂದಿಗೆ ಭವ್ಯ ಮೆರವಣಿಗೆ ಮುಖಾಂತರ ರಟಕಲ್ ಗ್ರಾಮದ ಹನುಮಾನ್ ದೇವಸ್ಥಾನಕ್ಕೆ ಆಗಮಿಸಲಾಯಿತು.



ನಂತರ ತಾಯಂದಿರು ಕುಂಭ ಕಳಸ ದೊಂದಿಗೆ ಗ್ರಾಮದಲ್ಲಿ ಭವ್ಯ ಮೆರವಣಿಗೆ ಮುಖಾಂತರ ಶ್ರೀ ಬಂಕನಾಥೇಶ್ವರ ದೇವಸ್ಥಾನಕ್ಕೆ ತಲುಪಿ, ಶ್ರೀ ಬಂಕನಾಥನಿಗೆ ಮಹಾಭಿಷೇಕ ಮಾಡಿ ನಂತರ ಏಕ್ತಾರಿ ಸಪ್ತಹ( ಓಂ ನಮಃ ಶಿವಾಯ) ಪ್ರಾರಂಭ ಮಾಡಲಾಯಿತು. ಈ ಸಂದರ್ಭದಲ್ಲಿ.ಸಿದ್ದರಾಮಣ್ಣ ಬಡಾ, ರುದ್ರಶೆಟ್ಟಿ ಗುರುಮಿಟ್ಕಲ್, ನಾಗರಾಜ್ ಏರಿ, ಜಗನ್ನಾಥ್ ಚೆಂಗಟಿ, ಮಲ್ಲಣ್ಣ ಸೇರಿ, ನಾಗಯ್ಯ ಬುಕ್ಕುಟಿಗಿ, ವಿಜಯಕುಮಾರ್ ಸರಡಗಿ, ಮಾನ್ ಶೆಟ್ಟಿ ಸಿಗಿ, ಮಹೇಶ್ ಬಿಜ್ಜನಹಳ್ಳಿ, ಕಾಶಿನಾಥ್ ಚೋಕ, ಶಾಂತಾಬಾಯಿ ಪಟ್ಟಣ, ಶಶಿಕಲಾ ಚೇಂಗಟ್ಟಿ, ರೆವಣಮ್ಮ ಕೊಡದೂರ್, ರಾಜಪ್ಪ ಕಿಣಿ, ನಾಗಯ್ಯ ದುದಗಿ, ರೈತ ಮುಖಂಡ ವೀರಣ್ಣ ಗಾಂಗಾಣಿ, ಮತ್ತು ಭಜನಾ ಮಂಡಳಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಪಂಪ್‌ಸೆಟ್ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹ; ಸಮಸ್ಯೆ ಬಗೆಹರಿಸದಿದ್ದರೆ ವಿದ್ಯುತ್ ಕೇಂದ್ರಕ್ಕೆ ಮುತ್ತಿಗೆ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಸಮೀಪದ ಲಿಂಗದಹಳ್ಳಿ ಗ್ರಾಮದ ಪಂಪ್‌ಸೆಟ್ ರೈತರಿಗೆ ಸಮರ್ಪಕ ಹಾಗೂ ನಿರಂತರ ವಿದ್ಯುತ್ ಪೂರೈಕೆ ಕಲ್ಪಿಸಬೇಕು. ಇಲ್ಲದಿದ್ದರೆ ಕರ್ನಾಟಕ ಪ್ರಾಂತ ರೈತ ಸಂಘಟನೆ, ಲಿಂಗದಹಳ್ಳಿ ಗ್ರಾಮ ಸಮಿತಿಯ ನೇತೃತ್ವದಲ್ಲಿ ವಿದ್ಯುತ್ ಸರಬರಾಜು ಕೇಂದ್ರಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಸಂಘಟನೆಯ ಅಧ್ಯಕ್ಷ ಮಾನಪ್ಪ ಬಿರಾದರ ಎಚ್ಚರಿಕೆ ನೀಡಿದರು.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ದಿನಕ್ಕೆ 7 ಗಂಟೆಗಳ ವಿದ್ಯುತ್ ಪೂರೈಕೆ ಮಾಡುವುದಾಗಿ ಅಧಿಕಾರಿಗಳು ಹೇಳಿದ್ದರೂ, ವಾಸ್ತವದಲ್ಲಿ ಕೇವಲ 2?3 ಗಂಟೆಗಳ ಕಾಲ ಮಾತ್ರ ವಿದ್ಯುತ್ ನೀಡಲಾಗುತ್ತಿದೆ. ಬಳಿಕ ವಿದ್ಯುತ್ ಸ್ಥಗಿತಗೊಳ್ಳುವುದರಿಂದ ರೈತರು ರಾತ್ರಿ ಪೂರ್ತಿ



ಹೊಲಗಳಲ್ಲಿ ಜಾಗರಣೆ ಮಾಡಿ ವಿದ್ಯುತ್‌ಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾಟಿ ಕಾರ್ಯಗಳು ಆರಂಭವಾಗಿರುವ ಈ ಸಂದರ್ಭದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದಿದ್ದರೆ ಕೃಷಿ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಲಿದೆ. ಆದ್ದರಿಂದ ಸಮಸ್ಯೆಯನ್ನು ತಕ್ಷಣ ಪರಿಹರಿಸಿ ರೈತರಿಗೆ ನಿರಂತರ ಹಾಗೂ ನಿಗದಿತ ಅವಧಿಯ ವಿದ್ಯುತ್ ಪೂರೈಕೆ ಖಚಿತಪಡಿಸಬೇಕು ಎಂದು ಅವರು ಆಗ್ರಹಿಸಿದರು.

ಸಂಘಟನೆಯ ಕಾರ್ಯದರ್ಶಿ ದುರುಗಪ್ಪ ನಾಯಕ ಮಾತನಾಡಿ, ನಾಟಿ ಅವಧಿಯಲ್ಲಿ ನಿಗದಿತ 7 ಗಂಟೆಗಳಿಗಿಂತ ಹೆಚ್ಚುವರಿಯಾಗಿ ವಿದ್ಯುತ್ ಪೂರೈಕೆ ಮಾಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಖಜಾಂಚಿ ಶಿವಾನಂದ, ಬಸವರಾಜ, ಅಂಬ್ರೇಶ್ ಪಾಟೀಲ್, ಮಂಜುನಾಥ ಬಿರಾದರ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಮುಖ್ಯಮಂತ್ರಿಗೆ ಸಂತೋಷ್ ನಾಟೇಕರ್ ಮನವಿ ಸ್ಟ್ರಿಂಗ್ ಎನರ್ಜಿ ಡ್ರಿಂಕ್ ನಿಷೇಧಕ್ಕೆ ಆಗ್ರಹ:



ನೈಜ್ಯ ದೆಸೆ ನ್ಯೂಸ್

ಭಾಲ್ಕಿ, ಜು. 7: ಆರೋಗ್ಯಕ್ಕೆ ಹಾನಿಕಾರಕ ಎಂಬ ಆರೋಪಗಳು ಕೇಳಿಬರುತ್ತಿರುವ "ಸ್ಟ್ರಿಂಗ್ (ಖಣುಟಿರ)" ಎನರ್ಜಿ ಡ್ರಿಂಕ್ ಅನ್ನು ಕರ್ನಾಟಕ ರಾಜ್ಯದಲ್ಲಿ ನಿಷೇಧಿಸಬೇಕು ಹಾಗೂ ಶಾಲೆ–ಕಾಲೇಜುಗಳ 500 ಮೀಟರ್ ವ್ಯಾಪ್ತಿಯಲ್ಲಿ ಅದರ ಮಾರಾಟಕ್ಕೆ ತಕ್ಷಣ ನಿರ್ಬಂಧ ವಿಧಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಹೊಯ್ಸಳ ವೇದಿಕೆ, ಬೀದರ್ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷ ಸಂತೋಷ್ ನಾಟೇಕರ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಭಾಲ್ಕಿ ತಹಸೀಲ್ದಾರರ ಮುಖಾಂತರ ಮನವಿ ಸಲ್ಲಿಸಿದ್ದಾರೆ.

ಮನವಿಯಲ್ಲಿ, ಸ್ಟ್ರಿಂಗ್ ಎನರ್ಜಿ ಡ್ರಿಂಕ್ ಅನ್ನು ಮಕ್ಕಳು ಹಾಗೂ ಯುವಕರು ಹೆಚ್ಚಾಗಿ ಸೇವಿಸುತ್ತಿದ್ದು, ಇದರ ಅತಿಯಾದ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪ–ರಿಣಾಮ ಉಂಟಾಗುತ್ತಿದೆ ಎಂಬ ಆರೋಪಗಳು ಬಹಳ ಸಮಯದಿಂದ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ ಎಂದು ತಿಳಿಸಿದ್ದಾರೆ. ವಿಶೇಷವಾಗಿ ಕಿಡ್ನಿ ಸೇರಿದಂತೆ ದೇಹದ ವಿವಿಧ ಅಂಗಗಳ ಆರೋಗ್ಯದ ಮೇಲೆ ಪರಿಣಾಮ ಉಂಟಾಗಬಹುದು ಎಂಬ ಆತಂಕವೂ ವ್ಯಕ್ತವಾಗುತ್ತಿದೆ ಎಂದು ಉಲ್ಲೇಖಿಸಿದ್ದಾರೆ.

ಇದಲ್ಲದೆ, ಈ ಎನರ್ಜಿ ಡ್ರಿಂಕ್ ಅನ್ನು ಒಮ್ಮೆ ಸೇವಿಸಿದ ನಂತರ ಮತ್ತೆ ಮತ್ತೆ ಸೇವಿಸಬೇಕೆಂಬ ಅಭ್ಯಾಸ ಯುವಕರಲ್ಲಿ ಬೆಳೆಯುತ್ತಿದೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಅನೇಕ ಯುವಕರು ಪ್ರತಿದಿನ ಹಲವು ಬಾಟಲಿಗಳನ್ನು ಸೇವಿಸುವ ಹವ್ಯಾಸಕ್ಕೆ ಒಳಗಾಗುತ್ತಿದ್ದಾರೆ ಎಂದು ಪೋಷಕರು ಹಾಗೂ ಸಾರ್ವಜನಿಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಇತ್ತೀಚೆಗೆ ಕರ್ನಾಟಕದ ಯಾದಗಿರಿ ಜಿಲ್ಲೆಯ 19 ವರ್ಷದ ಯುವಕನ ಸಾವಿನ ಕುರಿತು ವಿವಿಧ ಮಾಧ್ಯಮಗಳಲ್ಲಿ ವರದಿಯಾಗಿರುವ ಘಟನೆ ಸಾರ್ವಜನಿಕರಲ್ಲಿ ಆತಂಕ ಮೂಡಿಸಿದ್ದು, ಆ ಘಟನೆಯ ನಿಖರ ಕಾರಣವನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮಹಾರಾಷ್ಟ್ರ ಸರ್ಕಾರವು ಶಾಲೆ ಹಾಗೂ ಕಾಲೇಜುಗಳ 500 ಮೀಟ–ರ್ ವ್ಯಾಪ್ತಿಯಲ್ಲಿ ಇಂತಹ ಎನರ್ಜಿ ಡ್ರಿಂಕ್‌ಗಳ ಮಾರಾಟಕ್ಕೆ ನಿರ್ಬಂಧ ವಿಧಿಸಿರುವ ಕ್ರಮವನ್ನು ಉಲ್ಲೇಖಿಸಿರುವ ಅವರು, ಇದೇ ಮಾದ–ರಿಯ ನಿಯಮವನ್ನು ಕರ್ನಾಟಕದಲ್ಲಿಯೂ ಜಾರಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಾನ್ ಮಸಾಲೆ, ಗುಟ್ಕಾ ಹಾಗೂ ಡ್ರಗ್ಸ್ ವಿರುದ್ಧ ಕಠಿಣ ಕ್ರಮ ಕೈಗೊಂಡು 2028ರೊಳಗೆ ಡ್ರಗ್ಸ್ ಮುಕ್ತ ಕರ್ನಾಟಕ ನಿರ್ಮಿಸುವ ಸಂಕಲ್ಪ ವ್ಯಕ್ತಪಡಿಸಿರುವುದನ್ನು ಸ್ವಾಗತಿಸಿರುವ ಸಂತೋಷ್ ನಾಟೇಕರ್, ರಾಜ್ಯದ ಮಕ್ಕಳ ಹಾಗೂ ಯುವಜನರ ಆರೋಗ್ಯದ ಹಿತದೃಷ್ಟಿಯಿಂದ ಸ್ಟ್ರಿಂಗ್ ಸೇರಿದಂತೆ ಇಂತಹ ಎನರ್ಜಿ ಡ್ರಿಂಕ್‌ಗಳ ಕುರಿತು ವೈಜ್ಞಾನಿಕ ಅಧ್ಯಯನ ನಡೆಸಿ ಅಗತ್ಯವಿದ್ದರೆ ರಾಜ್ಯಾದ್ಯಂತ ನಿಷೇಧ ಅಥವಾ ಕಟ್ಟುನಿಟ್ಟಿನ ನಿಯಂತ್ರಣ ಜಾರಿಗೊಳಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ತ್ವರಿತವಾಗಿ ಕ್ರಮ ಕೈಗೊಂಡು ರಾಜ್ಯದ ಯುವಜನರ ಆರೋಗ್ಯವನ್ನು ರಕ್ಷಿಸಬೇಕು ಎಂದು ಅವರು ಮನವಿಯಲ್ಲಿ ಕೋರಿದ್ದಾರೆ. ಈ ಸಂದರ್ಭದಲ್ಲಿ ಪ್ರವೀಣ್ ಮೋರೆ, ಸಿದ್ಧಾರ್ಥ ಪಾಗ್ಗೆ, ಮಾಸ್ಕಂತ ವಾಗೆ, ಸಿದ್ದು ಜಮಾದಾರ್, ಅನೇಕರು ಉಪಸ್ಥಿತರು,

## ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಸಮಾವೇಶ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಬಿ.ಕೆ.ಹರಿಪ್ರಸಾದ್ ಕೆಪಿಸಿಸಿಗೆ ನೂತನ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯರ ಸಮಾವೇಶ ನಡೆಸಿದರು.ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ವೀರಪ್ಪ ಮೊಯ್ಲಿ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರಾದ ಸತೀಶ್ ಜಾರಕಿಹೊಳಿ, ಕೃಷ್ಣಭೈರೇಗೌಡ, ಮಾಜಿ ಸಚಿವರಾದ ಎಚ್.ಕೆ.ಪಾಟೀಲ್, ಆರ್.ವಿ.ದೇಶಪಾಂಡೆ, ಕೆಪಿಸಿಸಿ ಕಾರ್ಯಧ್ಯಕ್ಷರಾದ ಜಿ.ಸಿ.ಚಂದ್ರಶೇಖರ್ ಸೇ–ರಿದಂತೆ ಮತ್ತಿತರರು ಉಪಸ್ಥಿತರಿದ್ದರು.




ಸಭೆಯಲ್ಲಿ ಕಾಂಗ್ರೆಸ್ ನಾಯಕರು, ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಗೊಂದಲಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷ ಎಚ್ಚೆತ್ತುಕೊಂಡು 54 ಸಾವಿರ ಬೂತ್‌ಗಳಿಗೂ ಬಿಎಲ್‌ಎ 2ಗಳನ್ನು ನೇಮಿಸಿದೆ. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಬಿಎಲ್‌ಎಗಳ ನೇಮಕಾತಿಯಲ್ಲಿ ನಿರ್ಲಕ್ಷ್ಯತೆ ವಹಿಸಿವೆ. ಹೀಗಾಗಿ ಈಗ ನಡೆದಿರುವ ಎಸ್‌ಐಆರ್ ಪ್ರಕ್ರಿಯೆಗಳನ್ನು ರದ್ದು ಗೊಳಿಸಬೇಕೆಂದು ಬಿಜೆಪಿ–ಜೆಡಿಎಸ್ ಆಗ್ರಹಿಸುತ್ತಿವೆ ಎಂದರು.

ಬಿಹಾರ, ಪಶ್ಚಿಮ ಬಂಗಾಳ ಸೇ–ರಿದಂತೆ ಕೆಲವು ರಾಜ್ಯಗಳಲ್ಲಿ ಬಿಜೆಪಿಗೆ ಅನುಕೂಲಕರವಾದ ಎಸ್‌ಐಆರ್ ನಡೆದಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ವ್ಯಾಪಕವಾದ ಜನಜಾಗೃತಿ ಮೂಡಿಸಿದ್ದ–ರಿಂದ ಮತ್ತು ಬಿಎಲ್‌ಎಗಳನ್ನು ನೇಮಿಸಿದ್ದ–ರಿಂದ ಬಿಜೆಪಿಯವರು ಅಂದುಕೊಂಡಂತೆ ಅಲ್ಪಸಂಖ್ಯಾತರ, ದಲಿತರ, ಹಿಂದುಳಿದವರ್ಗ ಹಾಗೂ ಬಡವರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲು ಸಾಧ್ಯವಾಗಿಲ್ಲ. ಇದರಿಂದ ಹತಾಶರಾಗಿ ಟೀಕೆ ಮಾಡುತ್ತಿದ್ದಾರೆ. ಇಲ್ಲಿ ಅವ್ಯವಹಾರಗಳು ನಡೆದಿವೆ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ತನೂಲಕ ಕೇಂದ್ರ ಸರ್ಕಾರದ ಅಧಿಕಾರಿಗಳನ್ನೇ ಸಂಪೂರ್ಣವಾಗಿ ಬಳಸಿಕೊಂಡು ಎಸ್‌ಐಆರ್ ನಡೆಸುವ ಹುನ್ನಾರ ನಡೆದಿದೆ. ಈ ರೀತಿಯ ಸಂಚನ್ನು ಕಾಂಗ್ರೆಸ್ ಪ್ರಬಲವಾಗಿ ಎದು–ರಿಸಬೇಕು ಎಂದು ನಾಯಕರು ಕರೆ ನೀಡಿದರು. ಕೋಮುವಾದಿ ಶಕ್ತಿಗಳು ಅಶಾಂತಿಯ ವಾತಾವರಣ ನಿರ್ಮಿಸಿ ರಾಜಕೀಯ ಲಾಭ ಪಡೆದುಕೊಳ್ಳಲು ಹವಣಿಸುತ್ತಿವೆ. ಈ ವಿಷಯವಾಗಿ ಕಾಂಗ್ರೆಸ್ ಕಾರ್ಯಕರ್ತರು ಕಟ್ಟೆಚ್ಚರ ವಹಿಸಬೇಕು ಎಂದು ಕರೆ ನೀಡಿದರು.

ಸಿದ್ದರಾಮಯ್ಯ ಅವರು ಕಳೆದ 8 ವರ್ಷದಲ್ಲಿ ಮುಖ್ಯಮಂತ್ರಿಯಾಗಿ ತಾವು ಕೈಗೊಂಡ ಜನಪ್ರಿಯ ಯೋಜನೆಗಳ ಬಗ್ಗೆ ವಿವರಣೆ ನೀಡಿದರು.ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಪಕ್ಷದಲ್ಲಿನ ಒಗ್ಗಟ್ಟು ಪಾಲನೆ ಬಗ್ಗೆ ಹಿತವಚನದ ಮಾತಗಳನ್ನಾಡಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಕಲ್ಯಾಣ ಕರ್ನಾಟಕ ಭಾಗದ ಸಚಿವರು, ಶಾಸಕರು ಕಲಬುರಗಿ ಪ್ರವಾಸದಲ್ಲಿರುವುದ–ರಿಂದ ಸರ್ವ ಸದಸ್ಯರ ಸಮಾವೇಶದಲ್ಲಿ ಅವರ ಗೈರು ಹಾಜರಿ ಎದ್ದು ಕಾಣುತ್ತಿತ್ತು.

## "ಶಿವಯೋಗ ರತ್ನ ರಾಚೋಟೇಶ್ವರ ಮಹಾಸ್ವಾಮಿಗಳಿಂದ 33 ದಿನಗಳ ಕಾಲ ಶಿವಯೋಗ ಅನುಷ್ಠಾನ

ನೈಜ್ಯ ದೆಸೆ ನ್ಯೂಸ್

ಗದಗ್: ಜಿಲ್ಲೆಯ ಸುಕ್ಷೇತ್ರ ಅಂತೂರ್– ಬೆಂತೂರ್ ಗ್ರಾಮದ ಜಗದ್ಗುರು ಭೂದೇಶ್ವರ ಸಂಸ್ಥಾನ ಮಠದಲ್ಲಿ ಶಿವಯೋಗ ರತ್ನ ಶ್ರೀ ಷ. ಬ್ರ. ಡಾ!! ರಾಚೋಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು 60ನೇ ಮೌನಾನುಸ್ಥಾನ 16ನೇ ಶಿವಯೋಗ ಸಮಾಧಿಯ ಮತ್ತು ಶಿವಯೋಗ ಸಿದ್ಧಿಯಿಂದ 775 ವರ್ಷ ಬಾಳಿದ ಜಗದ್ಗುರು ಭೂದೇಶ್ವರ ಮೂರ್ತಿ ಪ್ರತಿಷ್ಠಾಪನ ಹಾಗೂ 775 ಲಿಂಗ ಪ್ರತಿಷ್ಠಾಪನೆ ಹಾಗೂ ಬಸವ ಮಹಾಪುರಾಣ ಮಹಾಮಂಗಳೋತ್ಸವವನ್ನು ಸುಕ್ಷೇತ್ರ ಅಂತೋರ್– ಬೆಂತೂರ್ ಗ್ರಾಮದಲ್ಲಿ ನೆರವೇರಿತು.

ಲೋಕಕಲ್ಯಾಣಕ್ಕಾಗಿ ಸತತ 775 ತಾಸು ಸರಾಸರಿ 33 ದಿನಗಳ ಕಾಲ ಶಿವಯೋಗ ಸಮಾಧಿಯಲ್ಲಿ ಗಾಳಿ, ಬೆಳಕು, ನೀರು ಆಹಾರ, ಏನು ಇಲ್ಲದೆ ಶಿವಯೋಗಾ ರತ್ನ ಶ್ರೀ ಷ. ಬ್ರ. ಡಾ!! ರಾಚೋಟೇಶ್ವರ ಶಿವಾಚಾರಿಗಳು ಬುದೇಶ್ವರ ಮಠದ ಮೇಲೆ ಇರುವ ಕಲ್ಲಿನ ಸಣ್ಣ ಒಂದು ಮಂದಿರದೊಳಗೆ ಶಿವ ಯೋಗ ಸಮಾಧಿಗೆ ಹೋದಾಗ ಅದನ್ನು ಬಾಗಿಲವನ್ನು ಹಾಕಿ ಬಾಗಿಲಿಗೆ ಇಟ್ಟಿಗೆ ಹಾಗೂ ಸಿಮೆಂಟ್ ನಿಂದ ಮುಚ್ಚಲಾಯಿತು ಮೇಲೆ ಆಕಳ ಸಗಣಿಯಿಂದ ಲಿಂಗವನ್ನು ಬಿಡಿಸಿ ಓಂ ಎಂದು



ಬರೆದು ಹೂ ಮಾಲೆಯನ್ನು ಹಾಕಿ ಮುಚ್ಚಲಾಗಿತ್ತು.

ಇವರು ಕಲ್ಯಾಣ ಕರ್ನಾಟಕದ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಹಿರೇಮಠ ಮನೆತನದ ತಂದೆ ಶರಣಯ್ಯ ತಾಯಿ ಶಕುಂತಲಾದೇವಿ ಪುತ್ರನಾಗಿ ಜನಿಸಿದ್ದರು. ಇವರ ಪ್ರಾಥಮಿಕ ಶಿಕ್ಷಣ ಸ್ವ–ಗ್ರಾಮದಲ್ಲಿ ಮತ್ತು ಪ್ರೌಢ ಶಿಕ್ಷಣ ಎಲ್ಲೆರಿ ಗ್ರಾಮದಲ್ಲಿ ಮುಗಿಸಿದರು. ಎಂ. ಎ. ಪದವಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮುಗಿಸಿ ಡಾಕ್ಟರೇಟ್ ಪದವಿ ಪಡೆದರು. ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದರು. ಗುರು ಗಂಗಾಧರ ಶಿವಾಚಾರ್ಯರಿಂದ ಅನುಗ್ರಹ ಪಡೆದು ಷ. ಬ್ರ. ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳಾಗಿ ಅಂತೂರು ಬೆಂತೂರು ಗ್ರಾಮಕ್ಕೆ ಆಗಮಿಸಿ 60ನೇ ಮೌನನುಷ್ಠಾನ 16ನೇ ಶಿವಯೋಗ ಸಮಾಧಿ 775 ತಾಸು ಅಂದರೆ 33 ದಿನಗಳ ಕಾಲ ಶಿವಯೋಗದಲ್ಲಿ ಮನವಿರಿಸಿದ ಪೂಜ್ಯರು ಪ್ರತಿ ಕ್ಷೇತ್ರಗಳಲ್ಲಿ ಗ್ರಾಮಗಳಲ್ಲಿ



ನಡೆದುಕೊಂಡು ಬಂದರು ನಡೆದಾಡುವ ದೇವರೆಂದು ಖ್ಯಾತಿ ಪಡೆದು ಭಕ್ತರ ಮನದಲ್ಲಿ ನೆಲೆಯೂರಿದರೂ.

33 ದಿನಗಳ ಮುಗಿದ ನಂತರ ಪೂಜೆಯ ವಿಧಿ ವಿಧಾನಗಳೊಂದಿಗೆ ಸುತ್ತಮುತ್ತಲಿನ ಎಲ್ಲಾ ಸ್ವಾಮೀಜಿಗಳು ಹೋಮ ಹವನ ಸಕಲ ಪೂಜೆಯೊಂದಿಗೆ ಊರಿನ ಹಿರಿಯರ, ಪೂಜ್ಯರು, ಹಾಗೂ ಪೊಲೀಸ್ ಸಿಬ್ಬಂದಿಯವರ, ಸಮ್ಮುಖದಲ್ಲಿ ಇಟ್ಟಿಗೆ ಹಾಗೂ ಸಿಮೆಂಟ್ ನಿಂದ ಕಟ್ಟಿದಂತ ಕಟ್ಟಡವನ್ನು ಸಲಾಕೆ ಮತ್ತು ಸುತ್ತಿಗೆಯಿಂದ ಹೊಡೆದು ಬಾಗಿಲವನ್ನು ತೆಗೆದು ಷ. ಬ್ರ. ಶ್ರೀ ರಾಚೋಟೇಶ್ವರ ಮಹಾಸ್ವಾಮಿಗಳನ್ನು ಹೊರ ತೆಗೆಯಲಾಯಿತು ಸಾವಿರಾರು ಜನ ಭಕ್ತರು ಕಾತುರದಿಂದ ಕಾಯುತ್ತಾ ಸ್ವಾಮೀಜಿಯವರ ಜಯಗೋಷ ಹಾಕುತ್ತ' ದೇವರನ್ನು ಪ್ರಾರ್ಥನೆ ಮಾಡುತ್ತಾ' ಸ್ವಾಮೀಜಿ ಸ್ವಾಮೀಜಿಯವರ ದರ್ಶನ ಪಡೆದು ಪುನೀತರಾದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101